# ಪ್ರಸ್ತಾವನೆ

ಪ್ರವಾಸಿಗರ ಸ್ವರ್ಗವೆನ್ನಿಸಿಕೊಂಡಿರುವ, ಉದ್ಯಾನನಗರಿಯಾಗಿರುವ ಮೈಸೂರಿಗೆ ಚಾಮುಂಡಿಬೆಟ್ಟದ ರೂಪದಲ್ಲಿ ನೈಸರ್ಗಿಕವಾದ ಹಾಗೂ ಕಲಾತ್ಮಕವಾದ ಹಿನ್ನೆಲೆಯಿದೆ. ಈ ಬೆಟ್ಟದಲ್ಲಿಯೇ ಮೈಸೂರಿನ ಹಾಗೂ ಅದರ ರಾಜ ಮನೆತನದ ಅಧಿಷ್ಠಾತ್ರಿ ದೇವತೆ ಚಾಮುಂಡೇಶ್ವರಿ ನೆಲೆಸಿದ್ದಾಳೆ. ಈ ನಗರ ತನ್ನ ಪ್ರಾಚೀನ ಪರಂಪರೆಯನ್ನು ಅಲ್ಲಿಂದಲೇ ಪಡೆದುಕೊಂಡಿದೆ. ಬೌದ್ಧ ಧರ್ಮ ಪ್ರಸಾರಕ್ಕಾಗಿ ಅಶೋಕನು ಮಹಿಷ ಮಂಡಲಕ್ಕೆ ಬೌದ್ಧ ಧರ್ಮಪ್ರಚಾರಕನಾದ ಮಹಾದೇವನನ್ನು ಕಳುಹಿಸಿದುದಾಗಿ ಬೌದ್ಧ ಧರ್ಮ ಗ್ರಂಥಗಳಾದ ಮಹಾವಂಶ ಮತ್ತು ದೀಪವಂಶಗಳಲ್ಲಿ ಸೂಚಿಸಲಾಗಿದೆ. ಮಹಿಷ ಮಂಡಲವೇ ಮಹಿಷಾಸುರನ ನಗರವಾದ "ಮಹಿಷೂರು" – ಅಂದರೆ ದುರ್ಗೆಯು ಮಹಿಷಾಸುರನನ್ನು ಸಂಹರಿಸಿ, ಚಾಮುಂಡಿಯ ರೂಪದಲ್ಲಿ ಬೆಟ್ಟದ ಮೇಲೆ ನೆಲೆಗೊಂಡ ಸ್ಥಾನ ಎಂದು ಗುರುತಿಸಲಾಗಿದೆ.

ಚಾಮುಂಡಿ ಬೆಟ್ಟದ ಮೇಲೆ ಇರುವ ಮಹಾಬಲೇಶ್ವರ ದೇವಸ್ಥಾನ ಈ ನಗರದಲ್ಲಿ ಅತ್ಯಂತ ಪ್ರಾಚೀನ ದೇವಾಲಯ. ಮಹಾಬಲೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಕ್ರಿ.ಶ. 950ರ ಒಂದು ಶಾಸನ ಇದೆ. ಇದರ ಪ್ರಕಾರ ಈ ಪವಿತ್ರ ತಾಣವು "ಮೊಬ್ಬೆಲ ತೀರ್ಥ" – ಎಂಬ ಹೆಸರಿನಿಂದ ಪರಿಚಿತವಾಗಿತ್ತು. ಇದು ಪ್ರಾಯಶಃ ಮಹಾಬಲ ತೀರ್ಥದ ಅಪಭ್ರಂಶ ರೂಪ. ಖ್ಯಾತ ಹೊಯ್ಸಳ ದೊರೆ ವಿಷ್ಣುವರ್ಧನನು ಮಹಾಬಲ ತೀರ್ಥಕ್ಕೆ ಮಾಡಿದ ದಾನಗಳ ಬಗ್ಗೆ ಇದೇ ದೇವಸ್ಥಾನದಲ್ಲಿರುವ ಕ್ರಿ.ಶ. 1128ರ ಶಾಸನದಿಂದ ತಿಳಿದುಬರುತ್ತದೆ.

ಪ್ರಸಿದ್ಧವಾದ ಮತ್ತೊಂದು ದೇವಸ್ಥಾನವೆಂದರೆ ಮೈಸೂರು ನಗರದ ದೊಡ್ಡಕೆರೆಯ ದಡದಲ್ಲಿರುವ ಕೋಡಿ ಭೈರವೇಶ್ವರ ದೇವಸ್ಥಾನ. ಈ ಗುಡಿಗೂ ಮೈಸೂರು ಒಡೆಯರ ಅರಸು ಮನೆತನದ ಸಂಸ್ಥಾಪನೆಗೂ ನಿಕಟವಾದ ಸಂಬಂಧವಿದೆ. ಪರಂಪರೆಯ ಪ್ರಕಾರ ಕ್ರಿ.ಶ. 1399 ರಲ್ಲಿ ಯದುರಾಯ ಮತ್ತು ಕೃಷ್ಣರಾಯ ಎಂಬ ಇಬ್ಬರು ಸೋದರರು ವಿಜಯ ಮತ್ತು ಕೃಷ್ಣ ಎಂದೂ ಪ್ರಖ್ಯಾತರಾಗಿದ್ದಾರೆ. ಇವರು ಮೇಲುಕೋಟೆಯ ನಾರಾಯಣ ಸ್ವಾಮಿಯನ್ನು ಪೂಜಿಸಲು ಗುಜರಾತಿನ ದ್ವಾರಕೆಯಿಂದ ವಿಜಯನಗರದ ಮಾರ್ಗವಾಗಿ ಬಂದರು. ಮಹಿಷೂರಿನ (ಮೈಸೂರಿನ) ಸೌಂದರ್ಯದಿಂದ, ಮೋಹಿತರಾದ ಅವರು ಇದನ್ನೇ ತಮ್ಮ ಬೀಡನ್ನಾಗಿ ಮಾಡಿಕೊಂಡರು. ಓರ್ವ ಜಂಗಮನ ಆಗಮನಕ್ಕಾಗಿ ಕಾಯಬೇಕೆಂದು ಆ ರಾತ್ರಿಯನ್ನು ಕೋಡಿ ಭೈರವೇಶ್ವರನ ದೇವಸ್ಥಾನದಲ್ಲಿ ಕಳೆಯಬೇಕೆಂದೂ ಅವರಿಗೆ ಕನಸಿನಲ್ಲಿ ಸೂಚನೆ





ದೊರಕಿತು. ಮೈಸೂರಿನ ಸಣ್ಣ ಪ್ರಾಂತ್ಯದ ಅರಸಿಯಾಗಿದ್ದ ದೇವರಾಜಮ್ಮಣ್ಣಿಯವರು ಕಷ್ಟದ ಮತ್ತು ಬಿಕ್ಕಟ್ಟಿನ ಸನ್ನಿವೇಶದಲ್ಲಿ ಸಿಲುಕಿಕೊಂಡಿದ್ದ ಬಗ್ಗೆ ಮುಂಜಾವಿನ ಸಮಯದಲ್ಲಿ ಸಂಭಾಷಣೆಯೊಂದು ಅವರ ಕಿವಿಗೆ ಬಿತ್ತು. ಆ ಹೊತ್ತಿಗೆ ದೊರೆ ಚಾಮರಾಜರು ಕಾಲವಾಗಿದ್ದರು. ಕಾರುಗಳ್ಳಿಯ ದಳವಾಯಿಯಾದ ಮಾರನಾಯಕ ತಾನು ರಾಜನಾಗುವುದಕ್ಕೆ ಅನುಕೂಲವಾಗುವಂತೆ, ತಮ್ಮ ಮಗಳನ್ನು ವಿವಾಹ ಮಾಡಿಕೊಡಬೇಕೆಂದು ಚಾಮರಾಜರ ರಾಣಿಯನ್ನು ಪೀಡಿಸುತ್ತಿದ್ದ. ಕುಲ ಪುರೋಹಿತರನ್ನು ಕೋಡಿ ಭೈರವೇಶ್ವರ ದೇವಸ್ಥಾನಕ್ಕೆ ಕಳುಹಿಸಬೇಕೆಂದು ರಾಣಿಗೆ ಆಕೆಯ ಮನೆ ದೇವತೆ ಕನಸಿನಲ್ಲಿ ಸೂಚಿಸಿದಳು. ಪುರೋಹಿತರು ಅರಮನೆಯ ಪರಿಸ್ಥಿತಿಯ ಬಗ್ಗೆ ಆ ಸೋದರರಿಗೆ ಮನದಟ್ಟು ಮಾಡಿಕೊಟ್ಟರು. ವಿವಾಹದ ಸಮಾರಂಭದಲ್ಲಿ ಪಾಲ್ಗೊಳ್ಳುವ ನೆಪದಲ್ಲಿ ರಾಣಿ ಮೈಸೂರಿನಿಂದ 25 ಕಿ.ಮೀ. ದೂರವಿರುವ ಹದಿನಾರು ಎಂಬ ಸಣ್ಣ ಗ್ರಾಮಕ್ಕೆ ಪುರೋಹಿತರ ಜೊತೆಯಲ್ಲಿ ತೆರಳಿದಳು. ಅಲ್ಲಿ ಮಾರನಾಯಕನನ್ನು, ಆತನ ಅನುಚರರನ್ನು ಕೊಂದುಹಾಕಲಾಯಿತು. ರಾಜಕುವರಿ ದೇವಾರಾಜಮ್ಮಣ್ಣಿಯನ್ನು ಯದುರಾಜನಿಗೆ ವಿವಾಹ ಮಾಡಿಕೊಡಲಾಯಿತು. ಈ ರೀತಿಯಲ್ಲಿ ಯದುರಾಜನೇ ಮೈಸೂರು ಅರಸು ಮನೆತನದ ಸಂಸ್ಥಾಪಕನಾದ.

## ಮೈಸೂರಿನ ಅರಸು ಮನೆತನ

ಕ್ರಿ. ಶ. 1399ರಲ್ಲಿ ಯದುರಾಯನಿಂದ ನೆಲೆಗೊಂಡ ಮೈಸೂರಿನ ಅರಸು ಮನೆತನದಲ್ಲಿ ಈವರೆಗೆ 25 ದೊರೆಗಳು ಆಗಿಹೋಗಿದ್ದಾರೆ. ಕ್ರಿ.ಶ. 1578ರಲ್ಲಿ ರಾಜ ಒಡೆಯರು ಪ್ರಾಬಲ್ಯಕ್ಕೆ ಬರುವವರೆವಿಗೂ ಮೈಸೂರು ರಾಜ್ಯ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ ಸಣ್ಣ ಸಾಮಂತ ರಾಜ್ಯವಾಗಿಯೇ ಇದ್ದಿತು. ಕ್ರಿ.ಶ. 1565ರಲ್ಲಿ ವಿಜಯನಗರದ ಪತನವಾಗುತ್ತಿದ್ದಂತೆಯೇ ಮೈಸೂರಿನ ಒಡೆಯರು ವಿಜಯನಗರದ ಪರಂಪರೆ ಸಂಪ್ರದಾಯಗಳನ್ನು ಉತ್ತರಾಧಿಕಾರದ ರೂಪದಲ್ಲಿ ಪಡೆದರು ಮತ್ತು ಅವನ್ನು ಮುಂದುವರಿಸಿಕೊಂಡು ಬಂದರು. ಕ್ರಿ.ಶ. 1610ರಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ವೈಭವ ವಿಜೃಂಭಣೆಗಳೊಡನೆ ಸಿಂಹಾಸನಾರೋಹಣ ಮಾಡಿದರು. ಆಗ ಶ್ರೀರಂಗಪಟ್ಟಣ ಮೈಸೂರಿನ ರಾಜಧಾನಿಯಾಗಿತ್ತು. ಅವರೇ ದಸರಾ ಉತ್ಸವಗಳನ್ನು ಪ್ರಾರಂಭಿಸಿದರು. ಅದನ್ನು ಇಂದಿಗೂ ಸಕಲ ವೈಭವಗಳಿಂದ ಆಚರಿಸಲಾಗುತ್ತಿದೆ. ರಾಜ ಒಡೆಯರ ಅನಂತರ ಮೈಸೂರಿನ ಸಾಂಸ್ಕೃತಿಕ ಪರಂಪರೆಗೆ ಕೊಡುಗೆಯಿತ್ತ ಅತ್ಯಂತ ಪ್ರಸಿದ್ಧರಾದ ದೊರೆಗಳು ಎಂದರೆ ರಣಧೀರ ಕಂಠೀರವ ನರಸರಾಜ ಒಡೆಯರು (ಕ್ರಿ.ಶ. 1638–1659) ಚಿಕ್ಕ ದೇವರಾಜ ಒಡೆಯರು (ಕ್ರಿ.ಶ. 1673–1704), ಮುಮ್ಮಡಿ

ಕೃಷ್ಣರಾಜ ಒಡೆಯರು (ಕ್ರಿ.ಶ. 1799–1868), ನಾಲ್ವಡಿ ಕೃಷ್ಣರಾಜ ಒಡೆಯರು (ಕ್ರಿ.ಶ. 1902–1940) ಮತ್ತು ಶ್ರೀ ಜಯಚಾಮರಾಜೇಂದ್ರ ಒಡೆಯರು (1940 ರಿಂದ ಭಾರತ ಗಣರಾಜ್ಯ ಸ್ಥಾಪನೆಯಾಗುವವರೆಗೆ).

1761 ರಿಂದ 1799ರ ವರೆಗಿನ ಅವಧಿಯಲ್ಲಿ ಒಡೆಯರ ಅನುವಂಶಿಕ ಆಳ್ವಿಕೆಯಲ್ಲಿ ವಿಚ್ಛಿತ್ತಿಯುಂಟಾಗಿತ್ತು. ಈ ಅವಧಿಯಲ್ಲಿ ವಾಸ್ತವವಾಗಿ ಹೈದರಾಲಿ ಮತ್ತು ಆತನ ಸುವಿಖ್ಯಾತ ಪುತ್ರ ಟೀಪೂ ಸುಲ್ತಾನ ರಾಜ್ಯದ ಆಳಿಕೆಗಾರರಾಗಿದ್ದರು. 1799ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡಾಗ ಟೀಪೂವಿನ ಪತನವಾಯಿತು. ಐದು ವರ್ಷ ವಯಸ್ಸಿನ ರಾಜಕುಮಾರ ಮುಮ್ಮಡಿ ಕೃಷ್ಣರಾಜ ಒಡೆಯರನ್ನು 1799ರಲ್ಲಿ ಅವರ ಪೂರ್ವಜರ ಸಿಂಹಾಸನಕ್ಕೆ ಒಡೆಯರನ್ನಾಗಿ ಸಂಸ್ಥಾಪಿಸಲಾಯಿತು.

## ಮೈಸೂರು ಅರಮನೆ – ಅದರ ಇತಿಹಾಸ ಮತ್ತು ವಾಸ್ತುಶಿಲ್ಪ ಹಳೆಯ ಅರಮನೆ

ಹದಿನಾಲ್ಕನೇ ಶತಮಾನದಲ್ಲಿ ರಾಜರು ಮೈಸೂರಿನಲ್ಲಿನ ಒಂದು ಅರಮನೆಯಲ್ಲಿ ವಾಸಿಸುತ್ತ ಇದ್ದರು ಎಂದು ಶ್ರೀ ಮನ್ಮಹಾರಾಜರ ವಂಶಾವಳಿ (ಅನಾಲ್ಸ್ ಆಫ್ ದಿ ಮೈಸೂರ್ ರಾಯಲ್ ಫ್ಯಾಮಿಲಿ) ನಮಗೆ ತಿಳಿಸುತ್ತದೆ. ಆದರೆ ಸಿಡಿಲು ಬಡಿದು ಅದು ನಾಶಗೊಂಡ ಮೇಲೆ, ರಣಧೀರ ಕಂಠೀರವ ನರಸರಾಜ ಒಡೆಯರು ಕ್ರಿ.ಶ. 1638ರ ಸುಮಾರಿನಲ್ಲಿ ಅದರ ಪುನರ್ ನಿರ್ಮಾಣ ಮಾಡಿದರು. ಮೈಸೂರು ಅರಮನೆಯ ಬಗ್ಗೆ ಮೊತ್ತ ಮೊದಲ ಖಚಿತವಾದ ಉಲ್ಲೇಖ ನಮಗೆ ಲಭಿಸುವುದು ಇಲ್ಲಿಯೇ. ಸೌಂದರ್ಯ ವಿಲಾಸ, ನಾಮ ತೀರ್ಥ ಮತ್ತು ಇತರ ತೊಟ್ಟಿಗಳನ್ನು ಪುನರ್ ನಿರ್ಮಿಸಿದ ಹಾಗೂ ಪುನರ್ ನಿರ್ಮಿತ ಅರಮನೆಯ ಸುತ್ತ ಹನ್ನೊಂದು ಫಿರಂಗಿಗಳನ್ನು ಇರಿಸಿದ (ಇವುಗಳ ಪ್ರತಿಯೊಂದಕ್ಕೂ ಪ್ರತ್ಯೇಕವಾದ ಹೆಸರಿತ್ತು) ಕೀರ್ತಿಗೆ ಅವರು ಪಾತ್ರರಾಗಿದ್ದಾರೆ. ಅವುಗಳ ಪೈಕಿ ಮುಖ್ಯವಾದವುಗಳ ಹೆಸರು ಹೀಗಿವೆ: ರಾಮಚಂದ್ರ, ಮುದ್ದುಕೃಷ್ಣ ಮತ್ತು ಸಿಂಹ, ಪ್ರಧಾನಿ ಹೈದರಾಲಿ ಕ್ರಿ.ಶ. 1760ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರನ್ನು ರಾಜಧಾನಿ ಮೈಸೂರಿಗೆ ಹಾಗೂ ಅರಮನೆಗೆ ಭೇಟಿ ನೀಡುವಂತೆ ಆಹ್ವಾನಿಸಿದ. ನಜರ್‌ಬಾದ್ ಎಂಬ ಹೆಸರಿನಲ್ಲಿ ಹೊಸ ನಗರವನ್ನು ಕಟ್ಟಿಸುವ ಸಲುವಾಗಿ 1793ರಲ್ಲಿ ಟೀಪೂ ಸುಲ್ತಾನನು ದೇವಸ್ಥಾನಗಳನ್ನು ಹೊರತು ಪಡಿಸಿ ಅರಮನೆಯೂ ಸೇರಿದಂತೆ ಎಲ್ಲ ಹಳೆಯ ಹಾಗೂ ಶಿಥಿಲಗೊಂಡಿದ್ದ ಕಟ್ಟಡಗಳನ್ನು ತೆಗೆಸಿ ಹಾಕಿದನು ಎನ್ನಲಾಗಿದೆ. 1799ರಲ್ಲಿ ಕೂಡ ಅರಮನೆ ಎಂಬ ಹೆಸರಿಗೆ ತಕ್ಕುದಾದ





ಭವನ ಮೈಸೂರಿನಲ್ಲಿ ಇದ್ದಂತೆ ಕಾಣುವುದಿಲ್ಲ. ಏಕೆಂದರೆ 1799ರಲ್ಲಿ ಯುವರಾಜರ ಪಟ್ಟಾಭಿಷೇಕ ಸಮಾರಂಭಕ್ಕೆ ಸೂಕ್ತವಾದಂಥ ಕಟ್ಟಡವಿರಲಿಲ್ಲ. ಹೀಗಾಗಿ ನಜರ್‌ಬಾದಿನಲ್ಲಿ ನಿರ್ಮಿಸಲಾದ ಚಪ್ಪರವೊಂದರಲ್ಲಿ ಆ ಸಮಾರಂಭವನ್ನು ನಡೆಸಬೇಕಾಯಿತು ಎಂದು ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಸ್ಪಷ್ಟವಾಗಿ ಹೇಳಿದ್ದಾನೆ. 1801ರ ಮೇ 26 ರಂದು ಡ್ಯೂಕನು ಆಗ ಕರ್ನಲ್ ಆರ್ಥರ್ ವೆಲ್ಲೆಸ್ಲಿ ತನ್ನ ಸೋದರ ಹೆನ್ರಿಗೆ ಬರೆದ ಪತ್ರದಲ್ಲಿ ಈ ರೀತಿ ತಿಳಿಸಿದ್ದಾನೆ. “ಹಳೆಯ ಮೈಸೂರಿನಲ್ಲಿ ಇದ್ದ ಹಳೆಯ ಅರಮನೆಯನ್ನು ಅದು ಯಾವ ರೀತಿಯಿತ್ತೋ ಹಾಗೆಯೇ ಪುನರ್ ನಿರ್ಮಿಸಲಾಗಿದ್ದು ರಾಜಮನೆಯತನದವರು ಅಲ್ಲಿಗೆ ಹೋಗಿದ್ದಾರೆ. ಅದನ್ನು ಹಳೆಯ ಬುನಾದಿಯ ಮೇಲೆಯೇ ನಿರ್ಮಿಸಲಾಗಿದೆ ಎಂದು ನಂಬಿದ್ದೇನೆ. ಈ ಸರ್ಕಾರ ಸ್ಥಾಪನೆಗೊಂಡಾಗ ಅವರು ಎಷ್ಟು ಸಂತೋಷದಿಂದ ಇರಬೇಕು ಎಂದು ಬಯಸಿದ್ದೇವೋ ಅಷ್ಟೇ ಸಂತೋಷದಿಂದ ಅವರು ಇದ್ದಂತೆ ತೋರುತ್ತದೆ. ಮೈಸೂರು ವಿಶಾಲವಾದ ಮತ್ತು ಸುಂದರ ಪಟ್ಟಣ ಆಗುತ್ತಿದ್ದು ಅದು ನಿವಾಸಿಗಳಿಂದ ತುಂಬಿತುಳುಕುತ್ತಿದೆ” 1803ರಲ್ಲಿ ಲಾರ್ಡ್‌ವೆಲ್ಲೆಸ್ಲಿಯು ಮೈಸೂರಿಗೆ ಭೇಟಿನೀಡಿದ ಹಾಗೂ ಅರಮನೆ ಚಿಕ್ಕದೂ ಚೊಕ್ಕವಾದುದೂ ಮತ್ತು ಅಪೂರ್ಣವಾಗಿರುವುದೂ ಆಗಿದೆ ಎಂದು ವಿವರಿಸಿದ್ದ. ಅಂದವಾದ ಪ್ರವೇಶದ್ವಾರ ಇದೆ ಎಂಬುದಾಗಿಯೂ ಅವನು ಹೇಳಿದ್ದಾನೆ. ಸುಮಾರು ಎರಡು ವರ್ಷಗಳ ಅವಧಿಯಲ್ಲಿ ಆತುರಾತುರವಾಗಿ ಕಟ್ಟಲಾದ ಅರಮನೆ 19ನೆಯ ಶತಮಾನದ ಅಂತ್ಯದ ವೇಳೆಗೆ ದುಃಸ್ಥಿತಿಯಲ್ಲಿದ್ದಂತೆ ತೋರುತ್ತದೆ ಮತ್ತು ಇದಕ್ಕೆ ಸೇರಿದಂತಿದ್ದ ಅನೇಕ ವಠಾರಗಳು ಮುರಿದು ಬೀಳುತ್ತಿದ್ದವು. ಇದೂ ಸಾಲದೆಂಬಂತೆ ಅಗ್ನಿ ಅನಾಹುತವೂ ಉಂಟಾಯಿತು. 1897ರಲ್ಲಿ ರಾಜಕುಮಾರಿ ಜಯಲಕ್ಷ್ಮಮ್ಮಣ್ಣಿಯವರ ವಿವಾಹದ ಸಂದರ್ಭದಲ್ಲಿ ವಿವಾಹದ ಆಚರಣೆಗಳ ಕೊನೆಯ ಹೊತ್ತಿಗೆ, ಆ ಮರದ ಅರಮನೆಯ ಬಹುಭಾಗ ಬೆಂಕಿಯಿಂದ ನಾಶವಾಗಿ ಹೋಯಿತು. ನಮ್ಮ ಅದೃಷ್ಟವೆಂದರೆ ಜಾನ್ ಬುರ್ಡ್‌ವುಡ್ ಎಂಬಾತ ಈ ಮರದ ಅರಮನೆಯ ಛಾಯಾಚಿತ್ರವನ್ನು ತೆಗೆದಿದ್ದುದು. ಈತ ಮೈಸೂರು ಸೇನೆಯಲ್ಲಿ ಲ್ಯಾನ್ಸರ್ (ಅಶ್ವಾ ರೋಹಿ) ಆಗಿದ್ದು ಮುಂದೆ ಭಾರತೀಯ ಸೇನೆಯ ಪ್ರಧಾನ ದಂಡನಾಯಕನಾದ ಮತ್ತು ಮುಂದೆ ಕೇಂಬ್ರಿಜ್‌ನ ಮಾಸ್ಟರ್ ಆಫ್ ಪೀಟರ್ ಹೌಸ್ ಆದ. ಈತ ಮಹಾರಾಜರಿಗೆ 1929ರಲ್ಲಿ ಆ ಛಾಯಾಚಿತ್ರವನ್ನು ಬಳುವಳಿಯಾಗಿ ನೀಡಿದ.

‘ಮೈಸೂರು ಗೆಜೆಟಿಯರ್’ನ ಸಂಪಾದಕರು 1897ರ ಫೆಬ್ರವರಿಯಲ್ಲಿ ನಡೆದ ಆ ಭೀಕರ ಅಗ್ನಿ ಅನಾಹುತಕ್ಕೆ ಮೊದಲು ಇದ್ದಂಥ ಆ ಮರದ

ಅರಮನೆಯ ಸುಂದರವಾದ ವರ್ಣನೆಯನ್ನು ನೀಡಿದ್ದಾರೆ. ಆ ವರ್ಣನೆ ಹೀಗಿದೆ "ಕೋಟೆಯಲ್ಲಿ ಪೂರ್ವಾಭಿಮುಖವಾಗಿ ಇರುವಂಥ ಮಹಾರಾಜರ ಅರಮನೆಯನ್ನು ಹಿಂದೂ ಶೈಲಿಯಲ್ಲಿ ನಿರ್ಮಿಸಲಾಗಿದೆ. ಬೇರೆ ಬೇರೆ ಕಾಲಗಳಲ್ಲಿ ಅರಮನೆಯ ಉದ್ಯೋಗದಲ್ಲಿದ್ದ ಯುರೋಪಿನ ಕೆಲವು ಕಲಾವಿದರು ಕೆಲವು ವರ್ಣಚಿತ್ರಗಳನ್ನು ಚಿತ್ರಗಳನ್ನು ಚಿತ್ರಿಸಿದ್ದಾರೆ ಎಂಬುದನ್ನು ಬಿಟ್ಟರೆ ಯುರೋಪಿನ ಪ್ರಭಾವದ ಕುರುಹುಗಳು ಮಾತ್ರ ಕಡಿಮೆಯೇ. ಉಜ್ವಲ ವರ್ಣಗಳನ್ನು ಲೇಪಿಸಿರುವ, ಮತ್ತು ವಿಶೇಷವಾಗಿ ಕೆತ್ತನೆ ಮಾಡಲಾಗಿರುವ ಮರದ ನಾಲ್ಕು ಕಂಬಗಳ ಆಸರೆಯನ್ನುಳ್ಳ ಮುಂಭಾಗದಲ್ಲಿ ಸಜ್ಜೆ ಅಥವಾ ದರ್ಬಾರು ಸಭಾಂಗಣದವಿದೆ. ಮಹಾರಾಜರು ವಿಶೇಷ ಸಂದರ್ಭಗಳಲ್ಲಿ ಸಿಂಹಾಸನದ ಮೇಲೆ ಕುಳಿತು ಜನರಿಗೆ ದರ್ಶನ ನೀಡುವ ಕೈಸಾಲೆಯೂ ಇದೆ. ಅದರ ಪ್ರಮುಖ ದ್ವಾರ ಸಜ್ಜೆಯ ಕೆಳಭಾಗದಲ್ಲಿರುವ ನಡುವಿನ ಓಣಿಗೆ ತೆರೆದುಕೊಳ್ಳುತ್ತದೆ ಈ ಅಂಗಳದ ಪಶ್ಚಿಮ ಭಾಗದ ಪಾರ್ಶ್ವದಲ್ಲಿ ಮಹಿಳೆಯರ ವಾಸದ ಕೊಠಡಿಗಳಿಗೆ ಹೋಗುವ ದ್ವಾರವಿದೆ. ಇದು ಅರಮನೆಯ ಪಶ್ಚಿಮ ಭಾಗದ ಬಹುಪಾಲನ್ನು ಆಕ್ರಮಿಸಿಕೊಂಡಿದೆ. ಉತ್ತರ ಪಾರ್ಶ್ವದಲ್ಲಿ ಆಯುಧ ಶಾಲೆ, ಗ್ರಂಥ ಭಂಡಾರ ಮೊದಲಾದ ವಿವಿಧ ಕಛೇರಿಗಳಿವೆ. ಮಹಾರಾಜರು ಇರುವ ವಿವಿಧ ಕೊಠಡಿಗಳು ದಕ್ಷಿಣ ಪಾರ್ಶ್ವದಲ್ಲಿ ಇವೆ. ಇವುಗಳ ಪೈಕಿ ಅಂಬಾ ವಿಲಾಸ ತುಂಬ ಆಸಕ್ತಿಯನ್ನು ತರಿಸುವಂಥದಾಗಿದೆ. ಇದು ಅರವತ್ತೈದು ಅಡಿ ಚದರ ಪ್ರದೇಶವನ್ನು ವ್ಯಾಪಿಸಿಕೊಂಡಿರುವ ಮತ್ತು ಮಧ್ಯದಲ್ಲಿ ಗೋಪುರಾಕಾರವಾಗಿರುವ (ಎತ್ತರದ ಚಾವಣಿ) ಹಾಗೂ ಹತ್ತು ಅಡಿ ಎತ್ತರವಾಗಿರುವ ಮಹಡಿಯ ಕೊಠಡಿಯಾಗಿದೆ. ಹಿಂದಿನ ರಾಜರು ಐರೋಪ್ಯ ಅತಿಥಿಗಳನ್ನು ಸ್ವಾಗತಿಸುತ್ತಿದ್ದುದು ಮತ್ತು ದೈನಂದಿನ ವ್ಯವಹಾರಗಳನ್ನು ನಡೆಸುತ್ತಿದ್ದುದು ಈ ಸ್ಥಳದಲ್ಲಿಯೇ. ಅಲ್ಲಿ ರಾಜರ ಆಸನವನ್ನು ಬೇರೆಯವರ ಆಸನಗಳಿಂದ ಪ್ರತ್ಯೇಕಿಸುವ ಸಲುವಾಗಿ ಮರದ ಕಟಕಟೆಯನ್ನು ನಿರ್ಮಿಸಲಾಗಿತ್ತು. ಪಕ್ಕದ ಗೋಡೆಗಳ ಮೇಲೆ ಚಿತ್ರಗಳನ್ನು ನೇತುಹಾಕಲಾಗಿತ್ತು. ಇವುಗಳಲ್ಲಿ ಮುಖ್ಯವಾಗಿದ್ದುವೆಂದರೆ ವಿವಿಧ ಕಾಲಘಟ್ಟಗಳಲ್ಲಿ ಮೈಸೂರಿನೊಡನೆ ಸಂಬಂಧಪಟ್ಟಿದ್ದ ಅಧಿಕಾರಿಗಳವು. ಇವನ್ನು ಮಹಾರಾಜರು ಯುರೋಪಿನ ತಮ್ಮ ಅತಿಥಿಗಳಿಗಗೆ ತೆರೆದು ತೋರಿಸುವ ಪರಿಪಾಠವಿದ್ದಿತು. ನೆಲವು ಸುಣ್ಣದ ಗಾರೆಯದಾಗಿತ್ತು. ಕಲಾತ್ಮಕವಾಗಿ ಕೆತ್ತನೆ ಮಾಡಲಾಗಿರುವ ದಂತದ ಅಥವಾ ಬೆಳ್ಳಿಯ ಅಲಂಕರಣಗಳನ್ನುಳ್ಳ ಬಾಗಿಲುಗಳನ್ನು ಹೊರತು ಪಡಿಸಿದರೆ ಭವ್ಯತೆ ಅಥವಾ ವೈಭವ ಪ್ರದರ್ಶನದ ಯಾವುದೇ ಪ್ರಯತ್ನ ನಡೆದಿರಲಿಲ್ಲ. ಈ ಕೈಸಾಲೆಯನ್ನು ಈಚೆಗೆ ಸಂಪೂರ್ಣವಾಗಿ ನವೀಕರಿಸಲಾಗಿದೆ ಮತ್ತು ಚಾವಣಿಯನ್ನು ಸುಂದರವಾದ





ಕಬ್ಬಿಣದ ಸ್ತಂಭಗಳ ಮೇಲಿರಿಸಲಾಗಿದೆ. ರಾಜರ ಊಟದ ಮತ್ತು ಮಲಗುವ ಕೋಣೆಗಳು ಬಹುಮಟ್ಟಿಗೆ ಚಿಕ್ಕವೂ, ಒಂದಕ್ಕೊಂದು ಅಂಟಿಕೊಂಡಂತೆಯೂ ಇದ್ದು, ಅವೆಲ್ಲ ಅಂಬಾ ವಿಲಾಸದ ಕಡೆಗೆ ತೆರೆದುಕೊಂಡಿವೆ ಮತ್ತು ಅದರ ಹೊರಭಾಗದಲ್ಲಿ ಮಹಾರಾಜರು ಪೂಜಿಸುವ ಪಟ್ಟದ ಗೋವಿನ ಕೊಟ್ಟಿಗೆಯಿದೆ. ಅವರ ದೇವರ ಮನೆ ಪಕ್ಕದಲ್ಲಿಯೇ ಇದೆ. 1800ರಲ್ಲಿ ಅರಮನೆಯನ್ನು ಬಹುಮಟ್ಟಿಗೆ ಸಂಪೂರ್ಣವಾಗಿ ಹೊಸದಾಗಿಯೇ ನಿರ್ಮಿಸಲಾಗಿದ್ದರೂ, ಅದರ ದುರಸ್ತಿ ಸರಿಯಾಗಿರಲಿಲ್ಲ ಮತ್ತು ಅದಕ್ಕೆ ಸೇರಿದಂತಿದ್ದ ಅನೇಕ ವಾಸದ ಮನೆಗಳು ಬೀಳುವ ಸ್ಥಿತಿಯಲ್ಲಿದ್ದವು. ಟೀಪೂ ಸುಲ್ತಾನ ಕೆಡವಿದ ಹಳೆಯ ಹಿಂದೂ ಅರಸು ಮನೆತನದ ಈ ಅರಮನೆಯ ಉಳಿದಿದ್ದ ಏಕೈಕ ಭಾಗವೆಂದರೆ ಒಳಭಾಗದಲ್ಲಿದ್ದ ಒಂದು ಕೊಠಡಿ. ಇದರ ಮಣ್ಣು ಗೋಡೆಗಳು ದಪ್ಪವಾಗಿಯೂ, ಭದ್ರವಾಗಿಯೂ ಇದ್ದವು. ಇದರ ಚಾವಣಿಗೆ ಅಲಂಕರಣ ಮಾಡಿದ್ದುದರಿಂದಾಗಿ ಇದು ವರ್ಣಾಲಂಕೃತ ಕೊಠಡಿ ಎಂದು ಪ್ರಸಿದ್ಧವಾಗಿತ್ತು. ಇದನ್ನು ಹಳೆಯ ಅರಮನೆಯ ಅತಿಥಿ ಸತ್ಕಾರದ ಕೋಣೆಯೆಂದು ಹೇಳಲಾಗುತ್ತಿತ್ತು. ಇದು ಅಂಥ ಆಡಂಬರದ ಕಟ್ಟಡವೇನೂ ಆಗಿರಲಿಲ್ಲ. ಬಹುಪಾಲು ಪೌರಸ್ತ್ಯ ರಾಜರ ಆಸ್ಥಾನಗಳಲ್ಲಿ ಇರುವಂತೆ ಇದನ್ನು ಪ್ರತ್ಯೇಕಿಸುವ ಕ್ರಮವೇನೂ ಇರಲಿಲ್ಲ. ಬಯಲಿನ ಮುಂದಿನ ಭಾಗವನ್ನು ಬಿಟ್ಟರೆ ಅರಮನೆಯ ಸುತ್ತಮುತ್ತ ಅರಮನೆಗೆ ಹೊಂದಿಕೊಂಡಂತೆಯೇ ಕಡುಬಡವರ ನಿವಾಸಗಳು ಇದ್ದವು".

## ಹೊಸ ಅರಮನೆ

ಮೈಸೂರು ಅರಮನೆಯ ವೈಭವವನ್ನು ಪುನರ್ ಸ್ಥಾಪಿಸುವ ಸಲುವಾಗಿ ಆಗ ರಾಜಪ್ರತಿನಿಧಿಯಾಗಿದ್ದ ಮಹಾರಾಣಿ ವಾಣೀ ವಿಲಾಸ ಸನ್ನಿಧಾನ ಅವರು ಹಳೆಯ ಅರಮನೆಯ ಮಾದರಿಯಲ್ಲಿ ಮತ್ತು ಅದೇ ಆಸ್ತಿಭಾರದ ಮೇಲೆ ಹೊಸ ಅರಮನೆಯನ್ನು ಕಟ್ಟಿಸಲು ತೀರ್ಮಾನಿಸಿದರು. ಶಿಮ್ಲಾದ ವೈಸರೀಗಲ್ ಲಾರ್ಡ್ಜ್‌ನ ವಾಸ್ತುಶಿಲ್ಪಿ ಹಾಗೂ ಮದರಾಸು ಸರ್ಕಾರದ ಸಲಹೆಗಾರ ವಾಸ್ತು ಶಿಲ್ಪಿ ಶ್ರೀ ಹೆನ್ರಿ ಇರ್ವಿನ್ ಅವರ ವಾಸ್ತುಶಿಲ್ಪಿ ನಕಾಶೆಗಳನ್ನು ಅನುಮೋದಿಸಲಾಯಿತು. ಹಳೆಯ ಅರಮನೆಯು ಬೆಂಕಿಯ ಅನಾಹುತಕ್ಕೆ ಸಿಲುಕಿ ಸ್ವಲ್ಪ ಮಟ್ಟಿಗೆ ಸುಟ್ಟುಹೋಗಿತ್ತು. ಹಾಗೂ ನಾಶವಾಗಿಬಿಟ್ಟಿತ್ತು. ಆದ್ದರಿಂದ 1897ರ ಆಕ್ಟೋಬರ್‌ನಲ್ಲಿ ಮಹಾರಾಣಿಯವರು ಹೊಸ ಅರಮನೆಯ ನಿರ್ಮಾಣ ಕಾರ್ಯವನ್ನು ಉದ್ಘಾಟಿಸಿದರು. ಮೈಸೂರು ರಾಜ್ಯದ ಅರಮನೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಆಗಿದ್ದ ಶ್ರೀ ಬಿ.ಪಿ. ರಾಘವುಲು ನಾಯ್ಡು. ಎ.ಸಿ.ಇ., ಅವರಿಗೆ ಕಟ್ಟಡ ನಿರ್ಮಾಣದ ಕಾರ್ಯಭಾರವನ್ನು

ವಹಿಸಲಾಯಿತು. ಅವರು ಹೊಸ ಅರಮನೆಯಲ್ಲಿ ಅಳವಡಿಸಬೇಕಾದ ವಾಸ್ತು ಶಿಲ್ಪ ವಿನ್ಯಾಸದ ಬಗ್ಗೆ ಕಲ್ಕತ್ತ, ದೆಹಲಿ ಮತ್ತು ಮದ್ರಾಸುಗಳಲ್ಲಿ ವ್ಯಾಪಕವಾದ ಅಧ್ಯಯನ ನಡೆಸಿದರು. ಅವರ ಕಾರ್ಯಕುಶಲತೆಯ ಹಾಗೂ ಕಲಾವಿದರ ಸಾಮರ್ಥ್ಯದ ಭವ್ಯ ಸ್ಮಾರಕವಾಗಿ ಇಂದಿಗೂ ಅದು ನಿಂತಿದೆ. ಹೊಸ ಪೇಟೆಗಳು ಮತ್ತು ಕಟ್ಟಡಗಳನ್ನು ನಿರ್ಮಿಸಿ ಮೈಸೂರನ್ನು ಅಭಿವೃದ್ಧಿಪಡಿಸುವ ಕಾರ್ಯಭಾರವೂ ಅವರದೇ ಆಗಿತ್ತು. 1900ರಲ್ಲಿ ನಿರ್ಮಿಸಿದ ಜಗನ್‌ಮೋಹನ್ ಅರಮನೆ, ವಿವಾಹ ಸಭಾಂಗಣ ನಿರ್ಮಾಣ ಕಾರ್ಯದ ಹೊಣೆಯೂ ಅವರದೇ ಆಗಿತ್ತು. ತಮ್ಮ ಎಂಜಿನಿಯರಿಂಗ್ ಕೌಶಲ್ಯಕ್ಕಾಗಿ ಅವರು ಅರಮನೆಯಿಂದ ಅನೇಕ ಪ್ರಶಸ್ತಿಗಳನ್ನು ಪಡೆದರು. ಕಲಾತ್ಮಕ ಪ್ರದರ್ಶನ ಬೀರುವಿಗಾಗಿ (ಷೋಕೇಶ್) 1908ರಲ್ಲಿ ಫ್ರಾಂಕೋ ಬ್ರಿಟಿಷ್ ವಸ್ತು ಪ್ರದರ್ಶನದಲ್ಲಿ ಅವರು ಒಂದು ಪ್ರಶಸ್ತಿಯನ್ನೂ ಗಳಿಸಿದರು.

ಅರಮನೆಯ ನಿರ್ಮಾಣ ಕಾರ್ಯ 1912ರಲ್ಲಿ ಪೂರ್ಣಗೊಂಡಿತು. ಇದಕ್ಕೆ ಆದ ಒಟ್ಟು ವೆಚ್ಚ ರೂ.41,47,913. ಅರಮನೆಯ ನಿರ್ಮಾಣ ಕಾರ್ಯದಲ್ಲಿನ ಎರಡು ವಿಶೇಷ ಅಂಶಗಳು ಗಮನಾರ್ಹವಾಗಿದೆ. ನಿರ್ಮಾಣದಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೂ ಸ್ಥಳೀಯ ಸಾಮಗ್ರಿಗಳನ್ನೇ ಬಳಸಿರುವುದು ಮತ್ತು ಅಗ್ನಿ ನಿರೋಧಕ ವಿಧಾನಗಳನ್ನು ಅಳವಡಿಸಿ ಕೊಂಡಿರುವುದು. ಅಗ್ನಿ ನಿರೋಧಕ ವಿಧಾನದ ಅಳವಡಿಕೆಯಂತೂ ಹೊಸ ವಿನ್ಯಾಸದ ಅತ್ಯಗತ್ಯ ಅಂಶವೇ ಆಗಿತ್ತು.

ಮುಖ್ಯ ಕಟ್ಟಡ ಬೃಹದಾಕಾರದ ಬೂದು ಬಣ್ಣದ ಗ್ರಾನೈಟ್‌ನಿಂದ ನಿರ್ಮಿತವಾಗಿದ್ದು ಮೂರು ಮಹಡಿಗಳನ್ನು ಹೊಂದಿದೆ. ಇದರ ಮೇಲಿನ ಐದು ಅಂತಸ್ತಿನ ಗೋಪುರ ಎದ್ದುಕಾಣುವಂತಿದೆ. ಈ ಗೋಪುರ ಚಿನ್ನದ ಕವಚದಿಂದ ಆವೃತವಾಗಿದೆ. ನೆಲದಿಂದ ಹಿಡಿದು ತುದಿಯಲ್ಲಿನ ಸ್ವರ್ಣ ಪತಾಕೆಯವರೆಗೆ ಈ ಗೋಪುರ 145 ಅಡಿ ಎತ್ತರವಾಗಿದೆ. ಮುಂಭಾಗದಲ್ಲಿ ಭವ್ಯವಾದ ಬೃಹತ್ತಾದ ಏಳು ಕಮಾನುಗಳು ಮತ್ತು ಮಧ್ಯ ಕಮಾನಿನ ಪಾರ್ಶ್ವಗಳಲ್ಲಿ ಎರಡು ಸಣ್ಣ ಕಮಾನುಗಳು ಇದ್ದು ಇವುಗಳಿಗೆ ಎತ್ತರವಾದ ಸ್ತಂಭಗಳು ಆಸರೆಯಾಗಿವೆ. ಮಧ್ಯದ ಕಮಾನುಗಳ ಮೇಲೆ ಪಾಗಾರವಾಗಿ ಗಜಲಕ್ಷ್ಮಿಯ ಶಿಲ್ಪವಿದೆ. ಹಳೆಯ ಅರಮನೆಯಂತೆಯೇ ಈ ಅರಮನೆಯನ್ನೂ ತೊಟ್ಟಿ ಎಂದು ಕರೆಯಲಾಗುವ ಅಂಗಳದ ಸುತ್ತ ನಿರ್ಮಿಸಲಾಗಿದೆ. ನೆಲ ಅಂತಸ್ತಿನಲ್ಲಿ ತೊಟ್ಟಿಯ ಪೂರ್ವಕ್ಕೆ ಭವ್ಯವಾದ ಆನೆ ಬಾಗಿಲು ಇದೆ. ಪಕ್ಕದಲ್ಲಿ ದಕ್ಷಿಣದಲ್ಲಿ ಸುಂದರವಾದ ಕಲ್ಯಾಣ ಮಂಟಪವಿದೆ. ನೆಲ ಅಂತಸ್ತಿನಲ್ಲಿ ಪೂರ್ವಾಭಿಮುಖವಾಗಿ ಬೃಹತ್ ದರ್ಬಾರು ಸಭಾಂಗಣವಿದೆ (ದಿವಾನ್





– ಎ – ಆಮ್) ಇದು 47.25 ಮೀ (155 ಅಡಿ) ಉದ್ದ ಮತ್ತು 12.80 ಮೀ (42 ಅಡಿ) ಅಗಲವಾಗಿದೆ. ಇದೇ ಅಂತಸ್ತಿನಲ್ಲಿ ಅಂಬಾ ವಿಲಾಸ (ದಿವಾನ್–ಏ–ಖಾಸ್) ಎಂಬ ಸುಂದರವಾದ ಅಲಂಕರಿಸಲಾದ ಖಾಸಗಿ ದರ್ಬಾರು ಸಭಾಂಗಣವಿದೆ. ಎರಡನೆಯ ಅಂತಸ್ತಿನಲ್ಲಿ ಎಲ್ಲಾ ಪಾರ್ಶ್ವಗಳಲ್ಲಿ ಹಲವು ಕೊಠಡಿಗಳು ಮತ್ತು ದೊಡ್ಡ ಹಜಾರ ಇವೆ. ಕಲ್ಯಾಣ ಮಂಟಪ ನೆಲ ಅಂತಸ್ತಿನಲ್ಲಿದೆ ಇದು ನೋಡಲು ತುಂಬ ಸುಂದರವಾಗಿದೆ. ಅಷ್ಟ ಭುಜಾಕೃತಿಯ ವರ್ಣಚಿತ್ರಾಲಂಕೃತ ತೊಟ್ಟಿಗೆ ವೈವಿಧ್ಯಮಯವಾದ ಬಣ್ಣದ ಗಾಜಿನ ಚಾವಣಿಯನ್ನು ಹೊದಿಸಲಾಗಿದೆ. ಬಣ್ಣದ ಅಲಂಕರಣಗಳ ವಿನ್ಯಾಸವನ್ನು ಮೈಸೂರಿನ ಕಲಾಕಾರರೇ ಮಾಡಿದ್ದರಾದರೂ ಇದರ ವಿನ್ಯಾಸವನ್ನು ರೂಪಿಸಿದವರು “ವಾಲ್ಟರ್ ಮ್ಯಾಕ್ ಫರ್ ಲೇನ್ ಬಸಾರಸೆನ್ ಫೌಂಡ್ರಿ” ಎಂಬ ಗ್ಲಾಸ್ಗೊದಲ್ಲಿನ ಸುಪ್ರಸಿದ್ದ ಸಂಸ್ಥೆ. ಗುಮ್ಮಟಕ್ಕೆ ಅಲ್ಲಲ್ಲಿ ಬೀಡು ಕಬ್ಬಿಣದ ಕಂಬಗಳ ಆಸರೆಯನ್ನು ಒದಗಿಸಲಾಗಿದೆ. ಬಣ್ಣದ ಗಾಜಿನ ಅಲಂಕರಣದಲ್ಲಿನ ಹಾಗೂ ಮೊಸಾಯಿಕ್ ನೆಲದಲ್ಲಿನ ಮುಖ್ಯ ಆಕರ್ಷಣೆ ಎಂದರೆ ಅಲ್ಲಿ ಚಿತ್ರಿಸಲಾಗಿರುವ ನವಿಲು. ಹಾಗಾಗಿ ಇದನ್ನು ಮಯೂರ ಸಭಾಂಗಣ, ನವಿಲು ತೊಟ್ಟಿ ಎಂದೂ ಕರೆಯಲಾಗುತ್ತದೆ. ಪ್ರಮುಖ ಆಕರ್ಷಣೆಯಾದ ಬಣ್ಣದ ಗಾಜಿನ ಅಲಂಕರಣದ ಜೊತೆಗೆ ಈ ತೊಟ್ಟಿಯ ಗೋಡೆಗಳು ಸುಪ್ರಸಿದ್ಧ ಮೈಸೂರು ದಸರೆಯ ದೃಶ್ಯಗಳನ್ನು ತೋರಿಸುವ ವರ್ಣ ಚಿತ್ರಪಟ್ಟಿಕೆಗಳಿಂದ ಅಲಂಕೃತವಾಗಿವೆ.

ದಸರೆ ಅಥವಾ ನವರಾತ್ರಿ ಹಬ್ಬವನ್ನು ಮೊತ್ತ ಮೊದಲಿಗೆ ಬೃಹತ್ ಪ್ರಮಾಣದಲ್ಲಿ ಭವ್ಯವಾಗಿ ಆಚರಿಸಿದವರೆಂದರೆ ವಿಜಯನಗರದ ದೊರೆಗಳು, ಹಾಗೂ ಅವರು ಈ ಉತ್ಸವವನ್ನು ಆಚರಿಸಿದ್ದು ರಾಜಧಾನಿಯಾಗಿದ್ದ ಹಂಪಿಯಲ್ಲಿ. ವಿಜಯನಗರಕ್ಕೆ ಭೇಟಿ ನೀಡಿದ ಪೋರ್ಚುಗೀಸ್ ಪ್ರಜೆಯಾದ ಡೋಮಿಂಗೊ ಪೆಯಾಸ್, ಪರ್ಷಿಯಾದ ರಾಯಬಾರಿ ಅಬ್ದುರ್ ರಜಾಕ್ ಮೊದಲಾದ ಸಮಕಾಲೀನ ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಈ ಉತ್ಸವಗಳ ಕಣ್ಣಿಗೆ ಕಟ್ಟುವಂಥ ವರ್ಣನೆಗಳಿವೆ. ವಿಜಯನಗರ ಸಾಮ್ರಾಜ್ಯದ ಅವಸಾನದೊಂದಿಗೆ ವಿಜಯನಗರದ ಈ ಪರಂಪರೆಗಳನ್ನು ಉಳಿಸಿ

* 1979ರಲ್ಲಿ ಗ್ಲಾಸ್ಗೋಗೆ ಭೇಟಿ ನೀಡಿದ ಸಮಯದಲ್ಲಿ ಈ ಸುಪ್ರಸಿದ್ಧ ಫೌಂಡ್ರಿ ಈಚೆಗೆ 1965ರಲ್ಲಿ ತನ್ನ ವಹಿವಾಟನ್ನು ನಿಲ್ಲಿಸಿತೆಂದೂ, ಈ ಸಂಸ್ಥೆಗೆ ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳು ಕಸವನ್ನು ಸುಡಲು ಉರಿಸುವ ಬೆಂಕಿಗೆ ಆಹುತಿಯಾದುವು ಎಂಬುದನ್ನು ತಿಳಿದು ನನಗೆ ತುಂಬ ದುಃಖವಾಯಿತು. ಆದರೆ ಸ್ಥಳೀಯ ವಾಣಿಜ್ಯ ಮಂಡಳಿಯ ಸಂಪುಟದಲ್ಲಿನ ಜಾಹಿರಾತು ಮೈಸೂರು ಅರಮನೆಯ ಅಂಬಾವಿಲಾಸ, ದರ್ಬಾರು ಸಭಾಂಗಣ ಗ್ಲಾಸ್ಗೊದ ವಾಲ್ಟರ್ ಮ್ಯಾಕ್‌ಫರ್‌ಲೇನ್‌ರವರು ನಿರ್ವಹಿಸಿದ ಕಾರ್ಯ ಎಂದು ಹೆಮ್ಮೆಯಿಂದ ಪ್ರಕಟಿಸಿದೆ ಮತ್ತು ಅದರ ಚಿತ್ರವನ್ನು ನೀಡಿದೆ.

ಬೆಳೆಸಿಕೊಂಡವರು ಕೆಳದಿ ಮತ್ತು ಇಕ್ಕೇರಿಯ ನಾಯಕರು ಹಾಗೂ ಮೈಸೂರಿನ ಒಡೆಯರು. ಅಲಂಕೃತ ಆನೆಯ ಮೇಲೆ ಚಿನ್ನದ ಅಂಬಾರಿಯಲ್ಲಿ ಕುಳಿತು ಸಾಗುವ ರಾಜರ ಜಂಬೂ ಸವಾರಿ ಎಂದು ಕರೆಯಲಾಗುವ ಸುಪ್ರಸಿದ್ಧ ಮೆರವಣಿಗೆಯೊಡನೆ ಮುಕ್ತಾಯಗೊಳ್ಳುತ್ತಿದ್ದ ಹತ್ತು ದಿನಗಳ ಅವಧಿಯ ಈ ಭವ್ಯ ಉತ್ಸವಗಳ ಮೂಲಕ ಮೈಸೂರು ದೊರೆಗಳು ದಸರೆಯನ್ನು ಅಮರಗೊಳಿಸಿದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹದಲ್ಲಿ ಹಾಗೂ ಅವರಿಂದ ನಿಯೋಜಿತರಾದ ಮೈಸೂರು ಕಲಾವಿದರು ಅರಮನೆಯ ಕಲ್ಯಾಣ ಮಂಟಪದಲ್ಲಿ ಗೋಡೆಗಳ ಮೇಲೆ ಅಳವಡಿಸಲಾಗಿರುವ ಕ್ಯಾನ್ವಾಸಿನ 26 ಪಟ್ಟಿಕೆಗಳಲ್ಲಿ ದಸರಾ ಮೆರವಣಿಗೆಯ ದೃಶ್ಯಗಳನ್ನು ಅಚ್ಚಳಿಯದಂತೆ ಚಿತ್ರಿಸಿದ್ದಾರೆ. ಹಾಗಾಗಿ ಕಲ್ಯಾಣ ಮಂಟಪವು ವಾಸ್ತುಶಿಲ್ಪ ಸೌಂದರ್ಯದ ದೃಷ್ಟಿಯಿಂದ ಮಾತ್ರವೇ ಅಲ್ಲದೆ ಚಿತ್ರಗಳ ಸುಂದರ ಚಿತ್ರಶಾಲೆಯೂ ಆಗಿದೆ.

ಸಾರ್ವಜನಿಕ ದರ್ಬಾರ್ ಸಭಾಂಗಣ ಬೃಹತ್ತಾದ ಕಂಬಗಳಿರುವ ಸಭಾಂಗಣವಾಗಿದ್ದು ಇದನ್ನು ಅದೇ ರೀತಿ ಸಂರಕ್ಷಿಸಿಕೊಂಡು ಬರಬೇಕಾಗಿದೆ. ಹಿಂಬದಿಯ ಗೋಡೆಗಳಲ್ಲಿ ರಾಜಾ ರವಿವರ್ಮರ ವರ್ಣಚಿತ್ರ (ರಾಮನು ಶಿವ ಧನುಸ್ಸನ್ನು ಮುರಿಯುತ್ತಿರುವುದು) ಮತ್ತು ಸುಪ್ರಸಿದ್ಧರಾದ ಸ್ಥಳೀಯ ಕಲಾವಿದರೂ ಶಿಲ್ಪಿಗಳೂ ಆದ ಶ್ರೀ ಶಿಲ್ಪಿ ಸಿದ್ದಲಿಂಗಸ್ವಾಮಿಗಳು ರಚಿಸಿರುವ ದೇವಿಯ ಅಷ್ಟ ರೂಪದ ಚಿತ್ರಗಳು ಅಂದರೆ ಕಾಳಿಕಾ, ನವದುರ್ಗ, ಮಹಿಷಮರ್ದಿನಿ, ಸರಸ್ವತಿ, ಮಹಾಲಕ್ಷ್ಮಿ, ಭುವನೇಶ್ವರಿ, ಗಾಯತ್ರಿ, ಮತ್ತು ರಾಜ ರಾಜೇಶ್ವರಿ ವರ್ಣ ಚಿತ್ರಗಳು ಇವೆ. ಮಧ್ಯಮ ಪಟ್ಟಿಯಲ್ಲಿ, ಮತ್ತೊಬ್ಬ ಸುಪ್ರಸಿದ್ಧ ಕಲಾವಿದರಾದ ದಿವಂಗತ ಶ್ರೀ ವೈ. ನಾಗರಾಜು ಅವರು ರಚಿಸಿರುವ ಮೈಸೂರು ರಾಜವಂಶದ ಬೃಹದ್ ವರ್ಣ ಚಿತ್ರವಿದೆ. ಇವರು ಕಲ್ಯಾಣ ಮಂಟಪದಲ್ಲಿನ ಕೆಲವು ವರ್ಣ ಚಿತ್ರ ಪಟ್ಟಿಕೆಗಳನ್ನು ರಚಿಸಿರುವರು. ಈ ಚಿತ್ರದ ಕುತೂಹಲಕಾರಿ ಅಂಶವೆಂದರೆ ಮೈಸೂರು ದೊರೆಗಳ ನಾಲ್ಕು ತಲೆಮಾರುಗಳವರನ್ನು ಇದರಲ್ಲಿ ಚಿತ್ರಿಸಿರುವುದು. ಅವರುಗಳೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಅವರ ತಮ್ಮ ಕಂಠೀರವ ನರಸರಾಜ ಒಡೆಯರು ಹಾಗೂ ಸುಂದರ ರಾಜಕುಮಾರ ಜಯಚಾಮರಾಜ ಒಡೆಯರು. ಜಯಚಾಮರಾಜ ಒಡೆಯರು ಮೈಸೂರು ರಾಜ್ಯ ಭಾರತದ ಒಕ್ಕೂಟವನ್ನು ಸೇರುವ ಮೊದಲು ಆಳಿದ ಕೊನೆಯ ದೊರೆಯೂ ಆಗಿದ್ದಾರೆ. ಈ ಎಲ್ಲ ವರ್ಣ ಚಿತ್ರಗಳನ್ನು ಸೂಕ್ಷ್ಮವಾಗಿ ಕೆತ್ತನೆ ಮಾಡಲಾದ ತೇಗದ ಮರದ ಚೌಕಟ್ಟುಗಳಲ್ಲಿ ಅಳವಡಿಸಲಾಗಿದ್ದು, ಸ್ವತಃ ಆ ಚೌಕಟ್ಟುಗಳೂ ಕಲಾಕೃತಿಗಳೇ ಆಗಿವೆ.





ಭವ್ಯವಾದ ಈ ದರ್ಬಾರು ಸಭಾಂಗಣವನ್ನು ಕಾನ್ಸ್ಟೆನ್ಸ್ ಇ. ಪಾರ್ಸನ್ಸ್‌ರವರ ಈ ಮಾತುಗಳಲ್ಲಿ ಅತ್ಯುತ್ತಮವಾಗಿ ಹೀಗೆ ವರ್ಣಿಸಬಹುದಾಗಿದೆ. ಈ ಶ್ರೇಷ್ಠ ದರ್ಬಾರು ಸಭಾಂಗಣದ ಸೊಬಗು, ಬಳಸಿರುವ ವಸ್ತುಗಳ ವೈವಿಧ್ಯ ವರ್ಣೋಜ್ವಲತೆ ಮತ್ತು ಅಲಂಕರಣ ಸಮೃದ್ಧಿ ಇವುಗಳನ್ನು ಕುರಿತಂತೆ ಮಾಡಬಹುದಾಗಿರುವ ಯಾವುದೇ ಸಂಕ್ಷಿಪ್ತ ನಿರೂಪಣೆ ಅವಕ್ಕೆ ನ್ಯಾಯವನ್ನು ದೊರಕಿಸಿ ಕೊಡಲಾರದು. ಗೋಡೆಗಳು ಚಾವಣಿಗಳೊಡನೆ, ಸ್ತಂಭಗಳು ದ್ವಾರಗಳೊಡನೆ ಮತ್ತು ಇವೆರಡು ಹಗಲು ಬೆಳಕಿನಲ್ಲಿ ಹಾಗೂ ಸಹಸ್ರ ಸಹಸ್ರ ಯಕ್ಷದೀಪಗಳಿಂದ ಪ್ರಜ್ವಲಿಸುವಾಗ, ಒಂದರೊಡನೊಂದು ಪೈಪೋಟಿ ನಡೆಸುತ್ತವೆ. ಸಾವಿರದೊಂದು ರಾತ್ರಿಗಳು (ಅರೇಬಿಯನ್ ನೈಟ್ಸ್) ಕಥೆಯಲ್ಲಿನ ವೈಭವ ಮತ್ತು ಆಕರ್ಷಣೆಯ ಬಗ್ಗೆ ಪೌರಸ್ತ್ಯ ರಾಜಾಸ್ಥಾನದ ಭವ್ಯ ವಾತಾವರಣದ ಬಗ್ಗೆ ಕವಿಗಳು ಮತ್ತು ಕಲಾವಿದರು ಕಂಡ ಕಲ್ಪನೆಗಳನ್ನೆಲ್ಲ ಇದು ಒಮ್ಮೆಗೇ ನಮ್ಮ ಮುಂದೆ ಸಾಕಾರಗೊಳಿಸುತ್ತದೆ.

ಹಳೆಯ ಸಭಾಂಗಣದ ಮುಂಭಾಗದಲ್ಲಿ, ಪೂರ್ವದಿಕ್ಕಿನಲ್ಲಿ 1932ರಲ್ಲಿ ಈ ದರ್ಬಾರು ಸಭಾಂಗಣವನ್ನು ವಿಸ್ತರಿಸಲಾಯಿತು. ಅಲಂಕೃತವಾದ ಸ್ತಂಭಗಳ ಆಧಾರವಿರುವ ಒಂಭತ್ತು ಕಮಾನುಗಳು ಮುಖ ಭಾಗದಲ್ಲಿದ್ದು, ಮೊದಲ ಉಪ್ಪರಿಗೆಯಲ್ಲಿ ಸುಂದರವಾದ ಮೊಗಸಾಲೆ ಇದೆ. ಸಭಾಂಗಣದಲ್ಲಿ ನಡುನಡುವೆ ಯಾವುದೇ ಕಂಬಗಳು ಇಲ್ಲದಿರುವುದರಿಂದ ಸಿಂಹಾಸನವನ್ನು ಮತ್ತು ದರ್ಬಾರು ಸಂದರ್ಭಗಳಲ್ಲಿನ ವಿವಿಧ ಕಾರ್ಯಕಲಾಪಗಳ ನೋಟವನ್ನು ಅಡೆತಡೆಯಿಲ್ಲದೆ ವೀಕ್ಷಿಸಬಹುದಾಗಿದೆ. ಮೊಗಸಾಲೆಯ ಮೇಲುಗಡೆ ಇರುವ ಕೊಠಡಿಗೆ ಕಲ್ನಾರು ಷೀಟುಗಳನ್ನು ಹಾಕಲಾಗಿತ್ತು. ಅದರ ಮೇಲೆ ವಿಷ್ಣುವಿನ ದಶಾವತಾರದ ವರ್ಣ ಚಿತ್ರಗಳನ್ನು ಬಿಡಲಾಗಿದೆ. ಚಾವಣಿಯ ಮಧ್ಯಭಾಗದ ಪಟ್ಟಿಕೆಯಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಸುತ್ತ ದ್ವಾದಶ ರಾಶಿಚಕ್ರಗಳನ್ನು ಚಿತ್ರಿಸಲಾಗಿದೆ. ಇವುಗಳನ್ನು ಚಿತ್ರಿಸಿದ ಕಲಾವಿದರು ಶಿಲ್ಪಿ ಸಿದ್ದಲಿಂಗಸ್ವಾಮಿಗಳು.

ದರ್ಬಾರು ಸಭಾಂಗಣದ ಮುಂಭಾಗವನ್ನು ಎರಡು ಗೋಪುರಗಳನ್ನುಳ್ಳ ಪಾರ್ಶ್ವ ಕಕ್ಷೆಗಳ ಸೇರ್ಪಡೆಯ ಮೂಲಕ ಮತ್ತಷ್ಟು ಉತ್ತಮಗೊಳಿಸಲಾಯಿತು. ಇವುಗಳನ್ನು ಕಲ್ಲಿನಲ್ಲಿ ಕಟ್ಟಲಾಗಿದೆ.

ಉತ್ತರ ಮತ್ತು ದಕ್ಷಿಣ ಪಾರ್ಶ್ವದ ಮುಂಭಾಗದಲ್ಲಿ ಅಮೃತಶಿಲೆಯ ಎರಡು ಶಾಸನಗಳು ಇವೆ. ಅದರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿ ಹೊಸ ದರ್ಬಾರು ಸಭಾಂಗಣದ ನಿರ್ಮಾಣವನ್ನು ಕೈಗೊಂಡ ಇಂಜಿನಿಯರುಗಳ ಹೆಸರುಗಳನ್ನು ದಾಖಲಿಸಲಾಗಿದೆ.

ಅಂಬಾ ವಿಲಾಸ (ದಿವಾನ್–ಏ–ಖಾಸ್) ವರ್ಣಗಳ ಸುಸಂಗತ ಮೇಳದಿಂದ ಅತ್ಯಂತ ಜಾಜ್ವಲ್ಯಮಾನವಾಗಿ ಅಲಂಕೃತವಾಗಿರುವ ಸಭಾಂಗಣವಾಗಿದೆ. ಸೂಕ್ಷ್ಮವಾದ ಕಲೆಗಾರಿಕೆಯನ್ನು ಒಳಗೊಂಡಿರುವ ಇದರ ಸೌಂದರ್ಯವನ್ನು ಮೀರಿಸುವಂಥ ಬೇರೊಂದು ಸಭಾಂಗಣ ಈ ಅರಮನೆಯಲ್ಲಿ ಇಲ್ಲವೇ ಇಲ್ಲ. ಸ್ತಂಭಗಳ ನಡುವಣ ನೆಲದಲ್ಲಿ ಆಗ್ರಾ ಕಲೆಯ ವೈಶಿಷ್ಟ್ಯಗಳನ್ನು ಕಾಣಬಹುದಾಗಿದೆಯಾದರೂ ಇದನ್ನು ಪೂರ್ಣಗೊಳಿಸಿರುವವರು ಸ್ಥಳೀಯ ಕೆಲಸಗಾರರೇ. ತೇಗದ ಮರದ ಚಾವಣಿ ಕೂಡ ಭವ್ಯವಾಗಿದ್ದು, ಸ್ಥೂಲವಾದ ಮತ್ತು ಸಂಕೀರ್ಣವಾದ ವಿನ್ಯಾಸದ ಕೆತ್ತನೆಗಳನ್ನು ಒಳಗೊಂಡಿದೆ. ದಂತದ 'ಇನ್‌ಲೇ'ಯಿಂದ ಕೂಡಿರುವ ಬೆಳ್ಳಿ, ತೇಗ ಮತ್ತು ಬೀಟೆ ಮರದ ಪ್ರತಿಯೊಂದು ಬಾಗಿಲೂ ವಿಷ್ಣುವಿನ ದಶಾವತಾರಗಳನ್ನು ಚಿತ್ರಿಸಿರುವ ಅಥವಾ ವಟಪತ್ರಶಾಯಿಯಾದ ಬಾಲಕೃಷ್ಣ ತನ್ನ ಕಾಲಿನ ಹೆಬ್ಬೆರಳನ್ನು ಚುಂಬಿಸುತ್ತಿರುವ ಹಾಗೂ ಇವೇ ಮೊದಲಾದ ಚಿತ್ತಾಕರ್ಷಕವಾದ ಅಲಂಕರಣದ ವಿನ್ಯಾಸಗಳನ್ನು ಒಳಗೊಂಡಿದೆ.

ಮಧ್ಯದ ಪಡಸಾಲೆ ತಾಂಡವಾಳದ ಸ್ತಂಭಗಳ ಆಸರೆಯನ್ನು ಪಡೆದಿದ್ದು, ಸೂಕ್ಷ್ಮವಾದ ಚಿತ್ತಾರ ವಿನ್ಯಾಸಗಳಿಂದ ಕೂಡಿರುವ ಅಲಂಕೃತವಾದ, ಸುಂದರವಾದ ಬಣ್ಣದ ಗಾಜಿನ ಚಾವಣಿಯಿಂದ ಆವೃತವಾಗಿದೆ. ತಾಂಡವಾಳದ ಸ್ತಂಭಗಳನ್ನು ಗ್ಲಾಸ್ಗೋದ ಸುಪ್ರಸಿದ್ಧ ಮ್ಯಾಕ್‌ಫರ್‌ಲೇನ್ ಸಂಸ್ಥೆಯವರು ತಯಾರಿಸಿದರು. ಅಂಬಾ ವಿಲಾಸದ ಅಲಂಕರಣ ಕಾರ್ಯವನ್ನು ಕರ್ನಾಟಕದ ಸುಪ್ರಸಿದ್ದ ಕಲಾವಿದ ಶ್ರೀ ಕೆ. ವೆಂಕಟಪ್ಪ ಅವರಿಗೆ ವಹಿಸಲಾಯಿತು. ಈ ಕಾರ್ಯವನ್ನು ವಹಿಸಿಕೊಡುವಾಗ ದಿವಂಗತ ನಾಲ್ವಡಿ ಕೃಷ್ಣರಾಜ ಒಡೆಯರು ಅವರಿಗೆ ಈ ರೀತಿ ಹೇಳಿದ್ದರು. "ನೀವು ನಿಮ್ಮ ಇಡೀ ಜೀವಮಾನವನ್ನು ಕುಶಲಕಲೆಗಳ ಅಧ್ಯಯನಕ್ಕಾಗಿ ಮುಡಿಪಾಗಿಟ್ಟಿದ್ದೀರಿ. ನಿಮ್ಮ ಜೀವಮಾನದ ಅವಧಿಯಲ್ಲಿಯೇ ನೀವು ಸುವಿಖ್ಯಾತರಾಗಿದ್ದೀರಿ. ನಮ್ಮ ಸಂಸ್ಥಾನಕ್ಕೆ ಅಪಾರ ಕೀರ್ತಿಯನ್ನುಗಳಿಸಿಕೊಟ್ಟಿದ್ದೀರಿ ಅದನ್ನು ನಾವು ಕಲೆಯ ಮೂಲಕ ತೋರಿಸಿಕೊಡಬೇಕು ಎಂಬುದೇ ನಮ್ಮ ಮಹತ್ವಾಕಾಂಕ್ಷೆ", ಸುಮಧುರ ವರ್ಣ ಸಂಯೋಜನೆಯನ್ನು ಕಲ್ಪಿಸಲು ವೆಂಕಟಪ್ಪನವರ ನೀಲಿ, ಹೊಂಬಣ್ಣ ಮತ್ತು ಕೆಂಪು ವರ್ಣಗಳು ಮೇಳೈಸಿರುವ ಈ ಸುಂದರವಾದ ಸಭಾಂಗಣದತ್ತ ಒಮ್ಮೆ ನೋಡಿದರೆ ಸಾಕು, ಈ ಮಹಾನ್ ಕಲಾಕಾರ ದಿವಂಗತ ಮಹಾರಾಜರ ನಿರೀಕ್ಷೆಯನ್ನು ಈಡೇರಿಸಿದ್ದಾರೆ ಎಂಬುದು ನಮಗೆ ಮನದಟ್ಟಾಗುತ್ತದೆ.





ಸೂಕ್ಷ್ಮಾಭಿರುಚಿಯ ಸುಂದರವಾದ ಈ ಸಭಾಂಗಣದಲ್ಲಿ ಮಹಾನ್ ಕಲಾವಿದ ಕೆ. ವೆಂಕಟಪ್ಪನವರು ರಚಿಸಿರುವ ಪ್ಲ್ಯಾಸ್ಟರ್ ಆಫ್ ಪ್ಯಾರಿಸಿನ ಮೂರು ಅರೆಯುಬ್ಬು ಶಿಲ್ಪಗಳಿವೆ. ಇವನ್ನು ಕಿಟಕಿಗಳ ನಡುವೆ ದಕ್ಷಿಣದ ಗೋಡೆಗೆ ಸೇರಿಸಿಡಲಾಗಿದೆ. ಅವು ಹನುಮಂತನು ರಾಮದೇವರಿಂದ ಮುದ್ರಿಕೆ ಯುಂಗುರವನ್ನು ಸ್ವೀಕರಿಸುತ್ತಿರುವುದು (1930ರಲ್ಲಿ ರಚಿಸಿದ್ದು). ಬುದ್ಧನು ಯಶೋಧರೆ ಮತ್ತು ರಾಹುಲರಿಂದ ಭಿಕ್ಷೆ ಸ್ವೀಕರಿಸುತ್ತಿರುವುದು (1933–34ರಲ್ಲಿ ರಚಿಸಿದ್ದು) ಮತ್ತು ಶಕುಂತಲೆ ಕಣ್ವ ಋಷಿಗಳಿಂದ ಬೀಳ್ಕೊಳ್ಳುತ್ತಿರುವುದು (1928ರಲ್ಲಿ ರಚಿಸಿದ್ದು)

ಮೈಸೂರು ಅರಮನೆಯ ಪ್ರಮುಖ ಆಕರ್ಷಣೆಯೆಂದರೆ ಪರಂಪರಾಗತವಾಗಿ ಬಂದಿರುವ ಚಿನ್ನದ ಸಿಂಹಾಸನ.

ಚಿನ್ನದ ಸಿಂಹಾಸನದಲ್ಲಿ ಆಸನ, ಸೋಪಾನ ಪಂಕ್ತಿ ಮತ್ತು ಚಿನ್ನದ ಕೊಡೆಗಳು ಇವೆ. ಕೊಡೆಯ ಹೊರ ಸುತ್ತಿನಲ್ಲಿ ಕೆತ್ತಲಾಗಿರುವ, ಅನುಷ್ಟುಪ್ ಛಂದಸ್ಸಿನಲ್ಲಿರುವ, 24 ಶ್ಲೋಕಗಳನ್ನು ಒಳಗೊಂಡ ಸಂಸ್ಕೃತ ಶಾಸನದ ಭಾಗವಾಗಿರುವ ಆಶೀರ್ವಾದ ಶ್ಲೋಕ ಈ ರೀತಿ ಇದೆ.

ಶ್ರೀ ಚಾಮುಣ್ಡಾಕೃಪಾಲಬ್ಧಶಾಶ್ವತೈಶ್ವರ್ಯಭಾಸ್ಕರ ।
ಕರ್ಣಾಟಕ ಪೃಥ್ವೀ ಸಾಮ್ರಾಜ್ಯ ರತ್ನ ಸಿಂಹಾಸನೇಶ್ವರ ॥
ಯಾದವಾನ್ವಯದುಗ್ಧಾಬ್ಧಿ ಶರದ್ರಾಕಾಸುಧಾರಕ
ಶ್ರೀ ಚಾಮರಾಜ ತನುಜ ಶ್ರೀ ಕೃಷ್ಣ ಧರಣೇಶ್ವರ ॥
ಕುಲ ಕ್ರಮಾಗತಂ ರಮ್ಯಂ ಭದ್ರಪೀಠಮುಪೇಯು ಷಃ
ಕೌತೂಹಲಾನಿ ಲೋಕಾನಾಂ ದೋಗ್ದಿ ಛತ್ರಮಿದಂ ತವ ॥
ತದ್ವಶೋ ವಿಮಲೇಂದು ಶ್ರೀ ಜಾತಾಭಿಭವಶಂಕಿತಃ
ಏಷರಾಕಾಸುಧಾಂಶು ಸ್ತ್ವಾಂ ಛತ್ರವ್ಯಾಜೇನ ಸೇವತೇ ॥
ತ್ವದಾಶ್ರಯಮಹಿಮ್ನಾ ಸೌನ್ಯಕೃತ್ಯ ತಪನತ್ವಿಷಂ
ಸದಾ ಕುವಲ ಯಾನಂದಮಾದತ್ತೇ ಛತ್ರಚಂದ್ರಮಾಃ ॥

(ಚಾಮರಾಜರ ಪುತ್ರನಾದ ಭೂಮಂಡಲಾಧಿಪತಿಯಾದ ದೊರೆ ಕೃಷ್ಣನೇ, ನಿನಗೆ ದೇವಿ ಚಾಮುಂಡೇಶ್ವರಿಯ ಕೃಪೆಯಿದೆ. ನೀನು ಕರ್ನಾಟಕ ರತ್ನ ಸಿಂಹಾಸನಾಧೀಶ್ವರ ಯದುವಂಶದ ಕ್ಷೀರಸಾಗರಕ್ಕೆ ನೀನು ಚಂದ್ರನಾಗಿದ್ದೀಯೆ. ನಿಮ್ಮ ಖ್ಯಾತ ಪೂರ್ವಿಕರಿಂದ ಪಡೆದುಕೊಂಡು ಚಿನ್ನದ ಸಿಂಹಾಸನದ ಚಿನ್ನದ ಛತ್ರಿಯ ಇಡೀ ವಿಶ್ವದ ಕುತೂಹಲವನ್ನು ಕೆರಳಿಸುತ್ತದೆ.)

ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಉದ್ದೇಶಿಸಲಾಗಿರುವ ಈ ಶಾಸನದ ಪ್ರಕಾರ ಈ ರತ್ನ ಖಚಿತ ಸಿಂಹಾಸನವು ಮೈಸೂರು ರಾಜವಂಶಕ್ಕೆ ರಾಜರ ತಲೆಮಾರುಗಳಿಂದ ಬಂದುದಾಗಿದೆ.

ಈ ವಿಶಿಷ್ಟ ಸಿಂಹಾಸನದ ಇತಿಹಾಸ ರೋಮಾಂಚಕವಾಗಿದೆ. ಒಂದು ಪರಂಪರೆಯ ಪ್ರಕಾರ ಈ ಸಿಂಹಾಸನ ಮಹಾಭಾರತ ಖ್ಯಾತಿಯ ಪಾಂಡವರಿಗೆ ಸೇರಿದುದಾಗಿದ್ದು, ಇದು ಹಸ್ತಿನಾಪುರದಲ್ಲಿದ್ದಿತು. ಕಂಪಿಲರಾಯನು ಇದನ್ನು ಹಸ್ತಿನಾಪುರದಿಂದ ಈಗ ಆಂಧ್ರಪ್ರದೇಶದಲ್ಲಿರುವ ಪೆನುಗೊಂಡಕ್ಕೆ ತಂದ ಅಲ್ಲಿ ಇದನ್ನು ಭೂಮಿಯೊಳಗೆ ಇಡಲಾಗಿತ್ತು.

ವಿಜಯನಗರ ದೊರೆಗಳ ರಾಜಗುರುಗಳಾಗಿದ್ದ ವಿದ್ಯಾರಣ್ಯರು ಅದನ್ನು ಎಲ್ಲಿ ಹೂಳಲಾಗಿದೆ ಎಂಬುದನ್ನು ಒಂದನೇ ಹರಿಹರನಿಗೆ ಕ್ರಿ.ಶ. 1336ರಲ್ಲಿ ತೋರಿಸಿಕೊಟ್ಟರು. ಒಂದನೇ ಹರಿಹರನು ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರ ಪೈಕಿ ಒಬ್ಬನಾಗಿದ್ದ. ಈತ ಅದನ್ನು ಶೋಧನೆ ಮಾಡಿ ಮತ್ತೆ ಪಡೆದುಕೊಂಡ. ಈ ಪವಿತ್ರ ಸಿಂಹಾಸನವನ್ನು ಸುಮಾರು ಒಂದೂವರೆ ಶತಮಾನಕ್ಕೂ ಹೆಚ್ಚಿನ ಕಾಲ ಆನೆಗೊಂದಿಯಲ್ಲಿದ್ದ ವಿಜಯನಗರದ ರಾಜರು ಉಪಯೋಗಿಸುತ್ತಿದ್ದರು. ಹದಿನೇಳನೆಯ ಶತಮಾನದ ಆದಿ ಭಾಗದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರ ದೊರೆಗಳ ಮಾಂಡಲೀಕನು ಇದನ್ನು ಪಡೆದುಕೊಂಡ ಮತ್ತು ಇಲ್ಲಿಗೆ ತಂದ.

1609ರಲ್ಲಿ ಅಸ್ವಸ್ಥನಾಗಿದ್ದ ಅಧಿಪತಿ ಶ್ರೀರಂಗರಾಯನು ತಲಕಾಡಿಗೆ ಹೊರಟುಹೋಗುವ ಮೊದಲು ರಾಜ ಒಡೆಯರಿಗೆ ಸಿಂಹಾಸನವನ್ನು ವಹಿಸಿಕೊಟ್ಟ. 1610ರಲ್ಲಿ ರಾಜ ಒಡೆಯರು ವೈಭವಾಡಂಬರಗಳೊಡನೆ ಈ ಸಿಂಹಾಸನವನ್ನು ಆರೋಹಣ ಮಾಡಿದರು ಮತ್ತು ದಸರಾ ಮಹೋತ್ಸವಗಳನ್ನು ಪ್ರಾರಂಭಿಸಿದರು. ತಮ್ಮ ವಂಶಜರು ಈ ಉತ್ಸವಗಳನ್ನು ನಿರಂತರವಾಗಿ ಮುಂದುವರಿಸಿಕೊಂಡು ಬರಬೇಕೆಂಬುದಾಗಿಯೂ ಗೊತ್ತು ಪಡಿಸಿದರು. ಈ ರಾಜ ಸಿಂಹಾಸನ 1699ರಲ್ಲಿ ಚಿಕ್ಕದೇವರಾಜ ಒಡೆಯರ ವಶದಲ್ಲಿದ್ದಿತು ಎಂಬುದನ್ನು ಶಾಸನಾಧಾರಗಳು ಸೂಚಿಸುತ್ತವೆ. ಇದು ಟೀಪೂ ಸುಲ್ತಾನನ ಕಾಲದವರೆವಿಗೆ ಈ ರಾಜವಂಶದ ಸ್ವಾಧೀನದಲ್ಲಿದ್ದಿತು ಎಂಬುದನ್ನೂ ಇತರ ಐತಿಹಾಸಿಕ ದಾಖಲೆಗಳು ಸೂಚಿಸುತ್ತವೆ.

ಮತ್ತೊಂದು ಪರಂಪರೆಯ ಪ್ರಕಾರ, ಈ ಸಿಂಹಾಸನ ಕ್ರಿ.ಶ. 1700 ರಲ್ಲಿ ಚಿಕ್ಕ ದೇವರಾಜ ಒಡೆಯರಿಗೆ ಔರಂಗಜೇಬನು ನೀಡಿದ ಬಳುವಳಿ ಎನ್ನಲಾಗಿದೆ. ಔರಂಗ ಜೇಬನ ಆಸ್ಥಾನದಲ್ಲಿದ್ದ ಒಬ್ಬ ಆಸ್ಥಾನಿಕನೂ, ಚಿಕ್ಕ





ದೇವರಾಜ ಒಡೆಯರ ಮಿತ್ರನೂ ಆಗಿದ್ದ ಖಾಸಿಂ ಖಾನನು ದೆಹಲಿಯಲ್ಲಿ ಕಾಲವಾದನು. ಮೈತ್ರಿ ಬೆಳೆಸುವ ಸಲುವಾಗಿ ಸಾಮ್ರಾಟನಲ್ಲಿಗೆ ಒಂದು ನಿಯೋಗ ಕಳುಹಿಸಲು ಚಿಕ್ಕ ದೇವರಾಜ ಒಡೆಯರು ನಿರ್ಧರಿಸಿದರು. 1699ರಲ್ಲಿ ಹೊರಟ ನಿಯೋಗ 1700ರಲ್ಲಿ ವಾಪಸ್ಸು ಮರಳಿ ಬಂದಿತು. ಔರಂಗಜೇಬನು ಜಗದೇವರಾಜ ಎಂಬ ಅಂಕಿತದೊಡಗೂಡಿದ ಮುದ್ರೆಯುಂಗುರವನ್ನು, ದಂತದ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಅನುಮತಿಯನ್ನೂ ಕಳುಹಿಸಿದ ಎನ್ನಲಾಗಿದೆ. ಆದರೆ, ಈ ಪರಂಪರೆಗೆ ಸಾಕಷ್ಟು ಐತಿಹಾಸಿಕ ಸಾಕ್ಷ್ಯಾಧಾರದ ಬೆಂಬಲವಿಲ್ಲ.

ಟಿಪ್ಪು ಸುಲ್ತಾನನ ಪತನಾನಂತರ, ಈ ಸಿಂಹಾಸನವನ್ನು ಶ್ರೀರಂಗಪಟ್ಟಣ ದಲ್ಲಿ ಸುಲ್ತಾನನ ಅರಮನೆಯ ಒಂದು ಕೊಠಡಿಯಿಂದ ಸ್ವಾಧೀನ ಪಡಿಸಿ ಕೊಳ್ಳಲಾಯಿತು. ಈ ರಾಜ ಸಿಂಹಾಸನವನ್ನು ಶೀಘ್ರವಾಗಿ ಜೀರ್ಣೋದ್ಧಾರಗೊಳಿಸಿ 1799ರಲ್ಲಿ ಬಾಲದೊರೆ ಮುಮ್ಮಡಿ ಕೃಷ್ಣರಾಜ ಒಡೆಯರ ಪಟ್ಟಾಭಿಷೇಕಕ್ಕೆ ಬಳಸಲಾಯಿತು ಎಂಬುದಾಗಿ ತಿಳಿದು ಬರುತ್ತದೆ. ಅಂದಿನಿಂದ ಈ ರಾಜ ಸಿಂಹಾಸನ ಮೈಸೂರು ರಾಜ ಸಿಂಹಾಸನವಾಗೂ ಮೈಸೂರು ರಾಜ ಪರಿವಾರ ದವರಲ್ಲಿಯೇ ಉಳಿದಿದೆ.

ಸಿಂಹಾಸನವನ್ನು ಚಿನ್ನದ ಕಂಬಗಳು ಮತ್ತು ಮಾವಿನ ಎಲೆಗಳಿಂದ ಸಿಂಗರಿಸಿದೆ. ಪೀಠಕ್ಕೆ ಸಾಗುವ ಸೋಪಾನ ಪಂಕ್ತಿಯ ಕಟಾಂಜನವನ್ನು ಸ್ತ್ರೀ ಆಕೃತಿಗಳಿಂದ ಅಲಂಕರಿಸಿದೆ. ಚಿನ್ನದ ಛತ್ರಿಗೆ ತೋರಣಗಳಿವೆ. ಪೀಠವು ಕೂರ್ಮಾಸನವಾಗಿದೆ. ಸಿಂಹಾಸನದ ನಾಲ್ಕು ಪಾರ್ಶ್ವಗಳು ವ್ಯಾಳಗಳಿಂದ ಮತ್ತು ಲತೆಗಳಿಂದ ಅಲಂಕೃತವಾಗಿವೆ. ಪೂರ್ವದಲ್ಲಿ ಆನೆಗಳು, ದಕ್ಷಿಣದಲ್ಲಿ ಕುದುರೆ, ಪಶ್ಚಿಮದಲ್ಲಿ ಸೈನಿಕರು ಮತ್ತು ಉತ್ತರದಲ್ಲಿ ರಥಗಳು ರಾಜಸಿಂಹಾಸನವನ್ನು ಅಲಂಕರಿಸಿವೆ. ದಕ್ಷಿಣದಲ್ಲಿ ಬ್ರಹ್ಮ, ಉತ್ತರದಲ್ಲಿ ಮಹೇಶ್ವರ ಮತ್ತು ಮಧ್ಯದಲ್ಲಿ ವಿಷ್ಣು ಹೀಗೆ ತ್ರಿಮೂರ್ತಿಗಳೂ ಇರುವರು. ಮೂಲೆಗಳಲ್ಲಿ ವಿಜಯ ಮತ್ತು ನಾಲ್ಕು ಸಿಂಹಗಳು, ಕಾಲ್ಪನಿಕ ಶಾರ್ದೂಲಗಳೆರಡು, ಎರಡು ಅಶ್ವಗಳು ಮತ್ತು ಹಂಸಗಳು ಇವು ಹೀಗೆ ಇದರ ನಾಲ್ಕು ಮೂಲೆಗಳಲ್ಲೂ ಇವೆ. ಇದನ್ನು ನಾಗ ಅಪ್ಸರೆಯರು ಮತ್ತು ಅಷ್ಟ ದಿಕ್ಪಾಲಕರು ಸುಂದರಗೊಳಿಸಿರುವರು.

ಈ ಸಿಂಹಾಸನವು ಒಂದು ಸುಂದರ ಕಲಾಕೃತಿಯಾಗಿದೆ. 1940ರಲ್ಲಿ ಇದು ಸಣ್ಣಪುಟ್ಟ ಮಾರ್ಪಾಡುಗಳಿಗೆ ಒಳಗಾಗಿದೆಯಾದರೂ, ಮೂಲ ಕಲಾತ್ಮಕ, ಅಲಂಕರಣದ ಅಂಶಗಳನ್ನು ಉಳಿಸಿಕೊಂಡಿದೆ.*

ಅರಮನೆಯ ಮುಂಭಾಗದಲ್ಲಿ ಇರುವ ವಿಶಾಲವಾದ ಬಯಲು ಮತ್ತು ಅಲ್ಲಿ ರೂಪಿಸಲಾಗುತ್ತಿರುವ ಉದ್ಯಾನವನ, ಅರಮನೆಯ ಇಡೀ ರಚನೆಗೆ ಆಕರ್ಷಕತೆ ಮತ್ತು ಭವ್ಯತೆಯನ್ನುಂಟುಮಾಡಿದೆ, ಈ ಅರಮನೆ ಅದರ ದೀಪಾಲಂಕಾರಕ್ಕೆ ಪ್ರಸಿದ್ಧವಾಗಿದೆ. ಇಡೀ ಅರಮನೆಯ ಕಟ್ಟಡಕ್ಕೆ ಅದರ ಆಕೃತಿ ರೇಖೆಯನ್ನು ಅನುಸರಿಸಿ ಸಾಲುಸಾಲಾಗಿ ವಿದ್ಯುದ್ ಬಲ್ಬುಗಳನ್ನು ಹಾಕಲಾಗಿದೆ. ಅದನ್ನು ಹತ್ತಿಸಿದಾಗ ದೀಪಗಳದೇ ಅರಮನೆಯಂತೆ ಕಾಣುತ್ತದೆ. ಮೈಸೂರು ಅರಮನೆಯೊಂದಿಗೆ ಹೋಲಿಸಬಹುದಾದಂಥ ಇನ್ನೊಂದು ರಚನೆ ಪ್ರಪಂಚದಲ್ಲಿ ಬೇರೆ ಎಲ್ಲಿಯೂ ಇಲ್ಲ ಮತ್ತು ಅದು ವಿಶಿಷ್ಟವಾಗಿದೆ ಎಂದು ಅರಮನೆಗೆ ಭೇಟಿ ನೀಡುವವರು ಉದ್ಗರಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

## ಕೋಟೆ

ಅರಮನೆಯ ಕೋಟೆಯು ಪಶ್ಚಿಮ ತುದಿಯಲ್ಲಿದೆ. ಕೋಟೆ ಬಹುಮಟ್ಟಿಗೆ ಚತುರ್ಭುಜಾಕೃತಿಯದಾಗಿದೆ. ಮೈಸೂರು ರಾಜ ಸಂತತಿಯ ಸಂಸ್ಥಾಪಕರಾದ ಯದುರಾಯರು ಮೈಸೂರು ಸಂಸ್ಥಾನದ ಆಡಳಿತ ಸೂತ್ರವನ್ನು ಸ್ವೀಕರಿಸಿದಾಗ, ಸಣ್ಣಮಣ್ಣಿನ ಕೋಟೆಯಿತ್ತು ಎನ್ನಲಾಗಿದೆ. ವಾಸ್ತವವಾಗಿ ಅದನ್ನು ಅನೇಕ ಸಲ ಮಾರ್ಪಾಡುಗೊಳಿಸಲಾಗಿದೆ, ವಿಸ್ತರಿಸಲಾಗಿದೆ ಮತ್ತು ಪುನರ್ ನಿರ್ಮಿಸಲಾಗಿದೆ. ಕೆಲವು ಆಧಾರಗಳ ಪ್ರಕಾರ, ಮೂರನೇ ಬೆಟ್ಟದ ಚಾಮರಾಜ ಒಡೆಯರ (1513–1552) ಕಾಲದಲ್ಲಿ ಕೋಟೆಯನ್ನು ಕಟ್ಟಲಾಯಿತು ಮತ್ತು ಪುನರ್ ನಿರ್ಮಿಸಲಾಯಿತು ಕೋಟೆಯನ್ನು ಮೂಲತಃ ಸುಮಾರು 1574ರಲ್ಲಿ ನಾಲ್ಕನೇ ಚಾಮರಾಜ ಒಡೆಯರು ಕಟ್ಟಿಸಿದರೆಂದು ಮತ್ತೆ ಕೆಲವರು ಅಭಿಪ್ರಾಯ ಪಡುತ್ತಾರೆ. ಅವರು ತಮ್ಮ ರಾಜಧಾನಿಯನ್ನು ಹದಿನಾರಿನಿಂದ ಪುರಗೆರೆಗೆ (ಇದಕ್ಕೆ ಮೈಸೂರು ಎಂದು ಅವರೇ ಹೊಸ ನಾಮಕರಣ ಮಾಡಿದರು) ಸ್ಥಳಾಂತರಿಸಿದರು ಎನ್ನಲಾಗಿದೆ. ಆದರೆ ಟಿಪ್ಪುವು ನಜರ್‌ಬಾದಿನಲ್ಲಿ ಹೊಸ ನಗರವನ್ನು ಕಟ್ಟಬೇಕು ಎಂದು ಅಪೇಕ್ಷಿಸಿದಾಗ ಕೋಟೆಯಲ್ಲಿದ್ದ ಪ್ರಾಚೀನ ದೇವಸ್ಥಾನಗಳನ್ನು ಬಿಟ್ಟು ಅರಮನೆ ಮತ್ತು ಕೋಟೆಯನ್ನು ಕೆಡವಿಸಿಬಿಟ್ಟ. 1799ರಲ್ಲಿ ಟೀಪೂವಿನ ಪತನಾನಂತರ ಕೋಟೆ ಮತ್ತು ಅದರಲ್ಲಿದ್ದ ಅರಮನೆಯನ್ನು ಪುನರ್ ನಿರ್ಮಾಣ ಮಾಡಲಾಯಿತು. ಅರಮನೆ ಕೋಟೆಯ ಬಗ್ಗೆ ಲ್ಯೂಯಿ ರೈಸ್ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಅದನ್ನೇ ಇಲ್ಲಿ ಉದ್ಧರಿಸುವುದು ಸೂಕ್ತವೆನ್ನಿಸುತ್ತದೆ.

* ಚಿನ್ನದ ಸಿಂಹಾಸನವನ್ನು ಪ್ರತಿ ವರ್ಷ ದಸರಾ ಸಮಯದಲ್ಲಿ ಒಂಭತ್ತು ಅಥವಾ ಹತ್ತು ದಿನಗಳ ಮಟ್ಟಿಗೆ ಹೊರತೆಗೆದು 'ಅಂಬಾ ವಿಲಾಸ'ದ ಹಿಂಭಾಗದ ಅಷ್ಟಕೋನಾಕೃತಿ ಭಾಗದಲ್ಲಿ ಇಡಲಾಗುವುದು. ನಂತರ ಉಳಿದಂತೆ ಸಾರ್ವಜನಿಕ ವೀಕ್ಷಣೆಗೆ ಇದು ಲಭ್ಯವಿರುವುದಿಲ್ಲ.





"ಕೋಟೆಯು ಚೌಕಾಕಾರದ ತಳಕಟ್ಟಿನಿಂದ ಆಗಿದೆ. ಇದರ ಮೂರು ಪಾರ್ಶ್ವಗಳು ಸುಮಾರು 450 ಗಜಗಳ ಉದ್ದವಿರುವುವಾದರೆ, ದಕ್ಷಿಣದ ಇನ್ನೊಂದು ಪಾರ್ಶ್ವ ಸ್ವಲ್ಪಮಟ್ಟಿಗೆ ಹೆಚ್ಚು ಉದ್ದವಾಗಿದೆ. ಉತ್ತರ, ದಕ್ಷಿಣ, ಮತ್ತು ಪಶ್ಚಿಮಗಳಲ್ಲಿ ಮಹಾದ್ವಾರಗಳನ್ನು ಇಡಲಾಗಿದೆ. ಉತ್ತರ ಮತ್ತು ದಕ್ಷಿಣದಲ್ಲಿರುವ ಮಹಾದ್ವಾರಗಳು ಕೋಟೆಯ ಮುಂಗಟ್ಟಡಗಳಿಂದ ಸಂರಕ್ಷಿತವಾಗಿದೆ. ಸುತ್ತುವರಿದಿರುವ ದುರ್ಗಗಳ ಮಧ್ಯೆ ಅಲ್ಲಲ್ಲಿ ಕೂಡು ಗೋಡೆಗಳು ಇವೆ. ಆಗ್ನೇಯ ದಿಕ್ಕಿನಲ್ಲಿ ಫಿರಂಗಿ ಹೊಡೆಯಲು ಕಿಂಡಿಗಳಿರುವ ಕಿಂಡಿ ಕೋಣೆ ಮತ್ತು ಈಶಾನ್ಯ ಮೂಲೆಯಲ್ಲಿ ದಿಬ್ಬವಿರುವ ಬೆಂಗಾವಲು ನೆಲೆ ಇದೆಯಾದರೂ ರಕ್ಷಣೆಗಳು ಸುಯೋಜಿತವಾಗಿಲ್ಲ ಮತ್ತು ಸಾಕಷ್ಟು ಪ್ರಮಾಣದಲ್ಲಿಯೂ ಇಲ್ಲ. ಎಲ್ಲ ಪಾರ್ಶ್ವಗಳಲ್ಲೂ ಕೋಟೆಗೆ ಅಂಟಿ ಕೊಂಡಂತೆ ಮನೆಗಳು ಇವೆ. ಕೋಟೆಯ ಸುತ್ತ ಕಂದಕ ಮತ್ತು ಇಳಿಜಾರು ದಂಡೆ ಇದೆ. ಆದರೆ ಪೂರ್ವದಕ್ಕಿನಲ್ಲಿ ಕೋಟೆಯ ಕಂದಕ ಮತ್ತು ದೇವರಾಜ ಕೆರೆಯನ್ನು ನಂಜನಗೂಡಿನ ಹೆದ್ದಾರಿ ಬೇರ್ಪಡಿಸಿದೆ. ಕೋಟೆಯ ಒಳಭಾಗವು ಮನೆಗಳಿಂದ ಮುಖ್ಯವಾಗಿ ಅರಮನೆಯ ಭೃತ್ಯವರ್ಗದ ನಿವಾಸಿಗಳಿಂದ ಇಡಿಕಿರಿದಿದ್ದಿತು. ಅವೆಲ್ಲ ಈಗ ಬದಲಾವಣೆಗೊಂಡಿವೆ. ಕಂದಕವನ್ನು ಭರ್ತಿಮಾಡಿಬಿಡಲಾಗಿದೆ. ಅರಮನೆಯ ಸುತ್ತ ಅಲಂಕಾರಿಕ ಸಸ್ಯಗಳನ್ನು ಮತ್ತು ತೋಪುಗಳನ್ನು ಬೆಳೆಸಲಾಗಿದೆ ಮತ್ತು ಉದ್ಯಾನಗಳನ್ನು ರೂಪಿಸಲಾಗಿದೆ. ಒಳಭಾಗದಲ್ಲಿ ತುಂಬ ಇಡಿಕಿರಿದಿದ್ದ ಭಾಗಗಳನ್ನು ಖಾಲಿ ಮಾಡಿಸಲಾಗಿದೆ ಮತ್ತು ಸಾಮಾನ್ಯ ಸುಧಾರಣೆಗಳನ್ನು ಮಾಡಲಾಗಿದೆ.

ಇಪ್ಪತ್ತನೆಯ ಶತಮಾನದ ಮೊದಲ ಪಾದದಲ್ಲಿ ಕೋಟೆಯ ಒಳಗಡೆ ಅನೇಕ ಮನೆಗಳು ಮತ್ತು ಕಿರಿದಾದ ರಸ್ತೆಗಳು ಇದ್ದವು. ಹಿತ್ತಾಳೆ ಮಾರುವವರ ಮತ್ತು ಹೂವಾಡಿಗರ ಬೀದಿಗಳು ತುಂಬ ಆಕರ್ಷಕವಾಗಿದ್ದವು. 1898ರಲ್ಲಿ ಪ್ಲೇಗ್ ತಲೆದೋರಿತು. ಇದರಿಂದ ಅಪಾರ ಸಂಖ್ಯೆಯಲ್ಲಿ ಜನರು ಸತ್ತರು. ಹಾಗಾಗಿ ಕೋಟೆಯ ಒಳಭಾಗ ನಿವಾಸಿಗಳಿಂದ ಮುಕ್ತವಾಯಿತು. ಇದರಿಂದ ಕೋಟೆಯ ಒಳಭಾಗದಲ್ಲಿ ವಿವಿಧ ದೇವಸ್ಥಾನಗಳಿರುವ ವಿಶಾಲವಾದ ಮೈದಾನ ಈಗ ಲಭ್ಯವಾಗಿದೆ.

ಇಂದು ಕೋಟೆಗೆ ಐದು ಪ್ರವೇಶ ದ್ವಾರಗಳಿವೆ. ಈ ಎಲ್ಲ ದ್ವಾರಗಳನ್ನು ಇಂಡೋಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಜಯ ಮಾರ್ತಾಂಡ ಎಂಬ ಪೂರ್ವದಿಕ್ಕಿನ ಮಹಾದ್ವಾರ ಭವ್ಯವಾಗಿದೆ ಮತ್ತು ಪ್ರಭಾವ ಬೀರುವಂತಿದೆ. ಅದನ್ನು ಪುನರ್ಬಲಗೊಳಿಸಿ ಕಾಂಕ್ರಿಟಿನಿಂದ ನಿರ್ಮಿಸಲಾಗಿದೆ. ಮಧ್ಯದ ಕಮಾನು ದಾರಿ 60 ಅಡಿ ಎತ್ತರವಾಗಿದೆ. 45 ಅಡಿ ವಿಸ್ತಾರವಾಗಿದೆ.

ಉಳಿದ ಮಹಾದ್ವಾರಗಳು ಉತ್ತರದಲ್ಲಿ ಬಲರಾಮ ಜಯರಾಮ, ದಕ್ಷಿಣದಲ್ಲಿ ವರಾಹ ದ್ವಾರ ಎಂದು ಪ್ರಸಿದ್ಧವಾಗಿರುವ ದಕ್ಷಿಣ ಮಹಾದ್ವಾರದಿಂದ ಪ್ರವೇಶಿಸುತ್ತಾರೆ.

ಅರಮನೆಯ ಕೋಟೆಯ ಮುಂದಿನ ಇಡೀ ಬಯಲನ್ನು ಹಸಿರು ಹುಲ್ಲಿನ ಹಾಸುಗಳ ಸಮೇತ ಸುಂದರವಾದ ಉದ್ಯಾನವನವಾಗಿ ದಕ್ಷಿಣದಲ್ಲಿನ ಭಾಗವನ್ನು ಗುಲಾಬಿ ತೋಟವನ್ನಾಗಿ ಮತ್ತು ಹುಲ್ಲು ಹಾಸುಗಳನ್ನಾಗಿ ಹಾಗೂ ಉತ್ತರದಲ್ಲಿನ ಭಾಗವನ್ನು ಧ್ವಜೋದ್ಯಾನಗಳಾಗಿ ಅಭಿವೃದ್ಧಿಪಡಿಸಲಾಗಿದೆ. ಜಯಮಾರ್ತಾಂಡ ಮಹಾದ್ವಾರದ ಮುಖ್ಯಹಾದಿಯ ಇಕ್ಕೆಲಗಳಲ್ಲಿ ಬೃಹದ್ ಹುಲ್ಲು ಹಾಸುಗಳಲ್ಲಿ ವರ್ತುಲಾಕಾರದ ಎರಡು ಕಾರಂಜಿಗಳನ್ನು ಕೂಡ ಅಳವಡಿಸಲಾಗಿದೆ.

ದರ್ಬಾರು ಸಭಾಂಗಣದ ಮುಂಭಾಗದಲ್ಲಿ ಕಾಂಕ್ರೀಟು ಹಾಕಿರುವ ಅರೆ ವೃತ್ತಾಕಾರದ ಪ್ರದೇಶವಿದೆ. ಇದನ್ನು ದಸರಾ ಉತ್ಸವಗಳ ಸಮಯದಲ್ಲಿ ಸಮೂಹ ವಾದ್ಯ (ಮಾಸ್ ಬ್ಯಾಂಡ್) ಕಾರ್ಯಕ್ರಮಗಳು ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಉಪಯೋಗಿಸಿಕೊಳ್ಳಲಾಗುವುದು. ಈ ಪ್ರದೇಶದ ಪೂರ್ವ, ದಕ್ಷಿಣ ಮತ್ತು ಉತ್ತರದ ಮುಖ್ಯ ಹಾದಿಗಳಲ್ಲಿ ಬೃಹತ್ ಕಂಚಿನ ಹುಲಿಗಳ ರೂಪದಲ್ಲಿ ಜೋಡಿಯಾಗಿ ಆರು ಕಲಾವಸ್ತುಗಳು ವಿಜೃಂಭಿಸುತ್ತಿವೆ. ಅವನ್ನು ಸೂಕ್ತವಾದ ಪೀಠಗಳ ಮೇಲೆ ಅಳವಡಿಸಲಾಗಿದೆ. ಇಂಥದೇ ಹುಲಿಗಳ ಮತ್ತೊಂದು ಜೋಡಿಯನ್ನು ಕಲ್ಯಾಣ ಮಂಟಪದ ಸಂಕೀರ್ಣದ ಉತ್ತರಕ್ಕಿರುವ ಅಂಗಳದಲ್ಲಿ ಮಹಡಿ ಮೆಟ್ಟಿಲುಗಳ ಎರಡೂ ಪಾರ್ಶ್ವಗಳಲ್ಲಿ ಕಲ್ಲಿನ ಪೀಠಗಳ ಮೇಲೆ ಇರಿಸಲಾಗಿದೆ. ಈ ಕಂಚಿನ ಎಂಟು ಹುಲಿಗಳನ್ನು ಬ್ರಿಟನ್ನಿನ ರಾಯಲ್ ಅಕಾಡೆಮಿಯ ಬ್ರಿಟಿಷ್ ಶಿಲ್ಪಿ ರಾಬರ್ಟ್ ವಿಲಿಯಂ ಕೋಲ್ಟನ್‌ರವರು ನಿರ್ಮಿಸಿದ್ದಾರೆ. ಇವನ್ನು ರಜತ ಮಹೋತ್ಸವ ಗಡಿಯಾರ ಸ್ತಂಭದ (ದೊಡ್ಡ ಗಡಿಯಾರದ) ಎದುರಾಗಿ ಹಳೆಯ ಪ್ರತಿಮಾ ವೃತ್ತದಲ್ಲಿರುವ ಚಾಮರಾಜೇಂದ್ರ ಒಡೆಯರ ಅಮೃತಶಿಲಾ ಪ್ರತಿಮೆಯ ಬಳಿ ಪ್ರಮುಖ ಸ್ಥಾನಗಳಲ್ಲಿ ಇಡಬೇಕೆಂದು ಮೊದಲಿಗೆ ಉದ್ದೇಶಿಸಲಾಗಿತ್ತು. ಆದರೆ ಅವು ತಮ್ಮ ಹಂಗಾಮಿ ನೆಲೆಯಲ್ಲಿಯೇ ಖಾಯಂ ಆಗಿ ಉಳಿದುಕೊಂಡವು. 1909ರಲ್ಲಿ ರಾಬರ್ಟ್ ವಿಲಿಯಂ ಕೋಲ್ಟನ್ ಶಿಲಾ ಪ್ರತಿಮೆ ಮತ್ತು ಇತರ ಶಿಲ್ಪಗಳನ್ನು ನಿರ್ಮಿಸುವ ಸಲುವಾಗಿ ಅಧ್ಯಯನ ನಡೆಸಲು ಮೈಸೂರಿನಲ್ಲಿ ಮೂರು ತಿಂಗಳು ಕಳೆದಿದ್ದರು. ಕಂಚಿನ ಹುಲಿಗಳ ಪೈಕಿ ಒಂದರಲ್ಲಿ ಶಿಲ್ಪಿಯ ಸಹಿಯಿದೆ ಮತ್ತು 1909ರಲ್ಲಿ ಎಂಬ ಕಾಲವೂ ನಮೂದಿತವಾಗಿದೆ.





# ಮೈಸೂರು ಅರಮನೆ ಮಾರ್ಗದರ್ಶಿ

ಮೈಸೂರು ಅರಮನೆಯ ಮಹಾರಾಜರು ದರ್ಬಾರ್ ಮಾಡುವ, ದರ್ಬಾರ್ ಹಾಲ್ ಮತ್ತು ರಾಜ ವಂಶಸ್ಥರು ವಾಸ ಮಾಡುವ ವಾಸ ಗೃಹವೆಂದು ಪ್ರಮುಖವಾಗಿ ಎರಡು ವಿಭಾಗವಾಗಿ ಗುರುತಿಸಲಾಗಿದೆ.

ಶ್ರೀ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರ ಜನ್ಮ ದಿನಾಂಕ : 19–2–1953 ದೈವಾಧೀನರಾದ ದಿನಾಂಕ : 10–12–2013.

ಪ್ರಸ್ತುತ ದತ್ತು ಪುತ್ರ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರ ದತ್ತು ಸ್ವೀಕಾರ ಸಮಾರಂಭವು 23–2–2015 ರಂದು ಮತ್ತು ಪಟ್ಟಾಭಿಷೇಕ ಮಹೋತ್ಸವವು 27–2–2015 ರಂದು ಅರಮನೆಯ ಕಲ್ಯಾಣ ಮಂಟಪದಲ್ಲಿ ಜರುಗಿತು.

ಶ್ರೀ ಮಹಾರಾಜರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರ ವಿವಾಹ ಮಹೋತ್ಸವವು ತ್ರಿಷಿಕಾ ಕುಮಾರಿಯವರೊಂದಿಗೆ ದಿನಾಂಕ : 27–6–2016 ರಂದು ಅರಮನೆಯ ಕಲ್ಯಾಣ ಮಂಟಪದಲ್ಲಿ ಸಂಪ್ರದಾಯ ಬದ್ಧವಾಗಿ ನೆರವೇರಿಸಲಾಯಿತು.

ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕುಟುಂಬ ವರ್ಗದವರು ಅರಮನೆಯ ಪಶ್ಚಿಮ ಭಾಗದ ಆವರಣದಲ್ಲಿ ವಾಸವಾಗಿದ್ದಾರೆ.

ಅರಮನೆಗೆ ಭೇಟಿ ನೀಡುವ ವ್ಯಕ್ತಿಗಳಿಗೆ ಕಾರು ಮಾರ್ಗವಾಗಿ ಗೊಂಬೆ ತೊಟ್ಟಿಗೆ ಪ್ರವೇಶ ಕಲ್ಪಿಸಲಾಗಿದೆ. ಕಾರು ಮಾರ್ಗದಲ್ಲಿ ಮದ್ದುಗುಂಡು ಪೆಟ್ಟಿಗೆಗಳ ಸಹಿತ ನಾಲ್ಕು ಫಿರಂಗಿ ಗಾಡಿಗಳೊಡನೆ ಏಳು ಫಿರಂಗಿಗಳನ್ನು ಇಡಲಾಗಿದೆ. ಇವುಗಳ ಪೈಕಿ ಏಳು ಫಿರಂಗಿಗಳನ್ನು ಉತ್ಸವ ಸಂದರ್ಭಗಳಲ್ಲಿ ಎಂದರೆ ಮಹಾರಾಜರ ವರ್ಧಂತಿಗಳು, ವಿಜಯ ದಶಮಿಯಂದು ದಸರಾ ಮೆರವಣಿಗೆಗೆ ಮುಂಚೆ ಮತ್ತು ಬನ್ನಿಮಂಟಪದಲ್ಲಿ ಉಪಯೋಗಿಸಲಾಗುತ್ತಿತ್ತು. ಇಂದಿಗೂ ವಿಜಯ ದಶಮಿಯಂದು ಅಭಿನಂದನೆ ಸಲ್ಲಿಸಲು ಈ ಫಿರಂಗಿಗಳನ್ನು ಬಳಸಲಾಗುವುದು. ಪೆಟ್ಟಿಗೆಗಳನ್ನು ಹೊಂದಿರುವ ಉಳಿದ ನಾಲ್ಕನ್ನು ಫಿರಂಗಿ ಗಾಡಿಗಳು ಎಂದು ಕರೆಯುವರು. ಗೌರವ ರಕ್ಷೆಗಾಗಿ ಬಳಸುವ ಈ ಏಳು ಫಿರಂಗಿಗಳ ಪೈಕಿ ನಾಲ್ಕು ಫಿರಂಗಿಗಳನ್ನು ಫರ್ತ್ಸ್ ಉಕ್ಕಿನಿಂದ (Firths Steel) ಮಾಡಲಾಗಿದೆ. ಮತ್ತು ಅವುಗಳ ಮೇಲೆ HONI SOIT QUI MALY PENSE ಎಂಬ ಫ್ರೆಂಚ್ ಬರೆಹವಿದೆ. ಉಳಿದ ಮೂರು ಹಿತ್ತಾಳೆಯಿಂದ ಮಾಡಿದುವಾಗಿದೆ. ಕುಶಲಕರ್ಮಿಯ ಹೆಸರು ಎ. ಬ್ರೋಮೆ

(A BROME), ಸ್ಥಳ ಕಾಸಿಪುರ (COSSIPORE) ಹಾಗೂ 1856, 1857, ಮತ್ತು 1859 ಎಂಬ ಮೂರು ಬೇರೆ ಬೇರೆ ವರ್ಷಗಳು ನಮೂದಾಗಿವೆ. 1856, ಮತ್ತು 1857, ಎಂಬ ಕಾಲ ನಮೂದಾಗಿರುವುವುಗಳಲ್ಲಿ ಚಕ್ರವರ್ತಿಯನ್ನು ಪ್ರತಿನಿಧಿಸುವ ರಾಜ ಲಾಂಛನವಿದೆ. ಅವುಗಳ ಮೇಲೆ VR (ವಿಕ್ಟೋರಿಯಾ ರೆಜಿನಾ) ಎಂಬ ಸಂಕೇತ ಮತ್ತು ಶಾಸನ ಬರಹ ಇವೆ. 1859 ರ ಕಾಲಮಾನ ನಮೂದಿತವಾಗಿರುವುದರಲ್ಲಿ FONI SOIT QUI MAL Y PENSE ಎಂಬ ಫ್ರೆಂಚ್ ಬರಹವಿದೆ.

## ಗೊಂಬೆ ತೊಟ್ಟಿ

ದಸರಾ ಉತ್ಸವಗಳಲ್ಲಿ ಬೊಂಬೆಗಳ ಪ್ರದರ್ಶನಕ್ಕೆಂದು ಮೂಲತಃ ಗೊಂಬೆ ತೊಟ್ಟಿಯನ್ನು ನಿರ್ಮಿಸಲಾಗಿತ್ತು. ದಸರಾ ಸಮಯದಲ್ಲಿ ಬೊಂಬೆಗಳ ಪೂಜೆಯನ್ನು ನಡೆಸುವುದು ಮೈಸೂರಿನಲ್ಲಿ ಒಂದು ಸಂಪ್ರದಾಯವೇ ಆಗಿದೆ. ಇದು ವಿಜಯನಗರದ ಕಾಲದಿಂದ ಬಂದ ಸಂಪ್ರದಾಯ. ಈ ಹಬ್ಬಗಳಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಬೊಂಬೆಗಳನ್ನು ಸುಂದರವಾಗಿ ಜೋಡಿಸಿ ಇಡುತ್ತಾರೆ. ಈ ಸಂಪ್ರದಾಯ ಇಂದಿಗೂ ಮುಂದುವರಿದುಕೊಂಡು ಬಂದಿದೆ.

ಅರಮನೆಯಲ್ಲಿನ ಗೊಂಬೆ ತೊಟ್ಟಿಯನ್ನು ಈ ಉದ್ದೇಶಕ್ಕಾಗಿಯೇ ನಿರ್ಮಿಸಲಾಗಿತ್ತು ಮತ್ತು ಮಹಾರಾಜರುಗಳ ಕಾಲದಲ್ಲಿ ದಸರಾ ಉತ್ಸವಗಳ ಸಮಯದಲ್ಲಿ ಇದನ್ನು ಸಾರ್ವಜನಿಕರಿಗೆ ತೆರೆಯಲಾಗುತ್ತಿತ್ತು. ಇಂದು ಗೊಂಬೆ ತೊಟ್ಟಿಯ ಪಶ್ಚಿಮ ಭಾಗದ ಅಂಕಣಗಳಲ್ಲಿ ವಿವಿಧ ಕಲಾಕೃತಿಗಳ ಸಂಗ್ರಹವಿದೆ. ಇದರಲ್ಲಿ ರಾಜ ಮನೆತನದವರು ಸಂಗ್ರಹಿಸಿರುವ ಯೂರೋಪಿನ ಅಮೃತ ಶಿಲಾ ಶಿಲ್ಪಗಳೂ ಸೇರಿವೆ.

ಸಂದರ್ಶಕರು ಗೊಂಬೆ ತೊಟ್ಟಿಯ ದಕ್ಷಿಣ ತುದಿಯಲ್ಲಿರುವ ದ್ವಾರದ ಮೂಲಕ ಅರಮನೆಯನ್ನು ಪ್ರವೇಶಿಸುತ್ತಾರೆ. ಅವರನ್ನು ಆಕರ್ಷಿಸುವಂಥ ಮೊತ್ತಮೊದಲು ವಸ್ತು ಎಂದರೆ ಹಳೆಯ ಅರಮನೆಯ ಮರದ ಮಾದರಿ. ಆ ಅರಮನೆ 1897ಕ್ಕೆ ಮೊದಲು ಕೋಟೆಯಲ್ಲಿ ಇದ್ದಿತು. ಅದು ಒಂದು ಉತ್ತಮ ಮಾದರಿಯಾಗಿದ್ದು, ಆ ಕಾಲದ ವಾಸ್ತುಶಿಲ್ಪವನ್ನು ಬಿಂಬಿಸುತ್ತದೆ.

ಮುಂದಿನ ಅಂಕಣದಲ್ಲಿ ಯೂರೋಪ್ ಮೂಲದ ಅಮೃತ ಶಿಲೆಯ ಸಣ್ಣ ಪ್ರತಿಮೆಗಳಿವೆ. ಹದಿನೆಂಟನೆಯ ಶತಮಾನದ ಕೊನೆಯ ಮತ್ತು ಹತ್ತೊಂಬತ್ತನೆಯ ಶತಮಾನದ ಆದಿ ಭಾಗಗಳಲ್ಲಿ ಇಟಲಿಯ ಮತ್ತು ಸ್ಕ್ಯಾಂಡಿನೇವಿಯದ ಶಿಲ್ಪಿಗಳು ಅದರಲ್ಲಿಯೂ ವಿಶೇಷವಾಗಿ ಕ್ಯಾನೋವ ಮತ್ತು ಥೋರ್ ವಾಲ್ಡ್ಸರವರು ಅಮೃತಶಿಲೆಯಲ್ಲಿ ಅಂಥ ಅಲಂಕಾರಿಕ





ಶಿಲ್ಪಗಳನ್ನು ನಿರ್ಮಿಸುತ್ತಿದ್ದರು. ಈ ಕಲೆಗೆ ಫ್ರಾನ್ಸಿನಲ್ಲಿ ಅಧಿಕ ಪ್ರೋತ್ಸಾಹವೂ ದೊರಕಿತ್ತು. ಇದನ್ನು ನಿಯೋಕ್ಲಾಸಿಕಲ್ ಶೈಲಿ ಎಂದು ಕರೆಯಲಾಯಿತು. Ecole des beaux – Art (ಎಕೋಲೆ ಡೆ ಬಿಯಕ್ಸ್ ಆರ್ಟ್ಸ್) ಅಧಿಕೃತ ಮನ್ನಣೆ ಪಡೆದಿದ್ದುದರಿಂದ, ಅದು ಸಾಂಪ್ರದಾಯಿಕ ಶೈಲಿ ಎಂದೂ ಪ್ರಸಿದ್ಧವಾಗಿದೆ. ಈ ಸಂಗ್ರಹದಲ್ಲಿರುವ ಶಿಲ್ಪಗಳು ಈ ಪಂಥವನ್ನು ಪ್ರತಿನಿಧಿಸುತ್ತವೆ.

ಕೈಗೆಟುಕದ ದ್ರಾಕ್ಷಿ ಹುಳಿ ಎಂಬ ನಾಣ್ಣುಡಿಯನ್ನು ಬಿಂಬಿಸುವ ಲೋಹದ ಶಿಲ್ಪ ಆಸಕ್ತಿಯ ಮತ್ತೊಂದು ವಸ್ತುವಾಗಿದೆ. ಈ ಶಿಲ್ಪಾಕೃತಿಯು ವಾಸ್ತವವೆಂಬಂತೆ ತೋರುವ ಸಲುವಾಗಿ ಅದಕ್ಕೆ ದೀಪಗಳನ್ನು ಅಳವಡಿಸಲಾಗಿದೆ.

ಆಕರ್ಷಕವಾದ ಜೇಡಿಮಣ್ಣಿನ (ಪೋರ್ಸಿಲೀನ್) ಅಲಂಕಾರಿಕ ದೀಪಗಳ ಜೋಡಿ ಇಲ್ಲಿಯೇ ಇದೆ. ಇವು ಜಪಾನೀ ಮೂಲದವಾಗಿವೆ.

ಬೆಳ್ಳಿ ಕೊಡೆ ಮತ್ತು ರಾಮ, ಸೀತೆ, ಲಕ್ಷ್ಮಣ ಹಾಗೂ ಹನುಮಾನರನ್ನು ಪ್ರತಿನಿಧಿಸುವ ರಾಜಾಸ್ಥಾನದ ಭಾರತೀಯ ಅಮೃತಶಿಲಾ ಶಿಲ್ಪಗಳ ಜೊತೆಗೆ ಕನ್ನಡಿಯ ಅಲಂಕರಣವಿರುವ ಮರದ ಮಂಟಪ ಆಕರ್ಷಣೆಯ ಮತ್ತೊಂದು ವಸ್ತುವಾಗಿದೆ. ಇದು ಸ್ತಂಭಗಳಿರುವ ಕಮಾನಿನ ರಚನೆಯಾಗಿದೆ ಮತ್ತು ಇದರಲ್ಲಿ ಪೌರಾಣಿಕ ಕಲ್ಪನೆಯಾದ ಯಾಳಿಯ ಆರು ನಾಗಂದಿಗೆ ಆಕೃತಿಗಳಿವೆ. ಈ ಮರದ ಗುಡಿಯ ಮೇಲ್ಭಾಗದಲ್ಲಿ ಹಲವು ಸ್ತರಗಳ ವಿಮಾನವಿದೆ. ಮಂಟಪದಲ್ಲಿ ಗಣೇಶನ ವಿಗ್ರಹವಿದೆ.

ಗೊಂಬೆ ತೊಟ್ಟಿಯ ದಕ್ಷಿಣ ಮತ್ತು ಉತ್ತರ ಭಾಗಗಳು ಅರಮನೆಯ ತೊಟ್ಟಿಗೆ ಸಾಗುವ ಮಾರ್ಗದಿಂದ ಪ್ರತ್ಯೇಕಿಸಲ್ಪಟ್ಟಿದೆ. ಅದಕ್ಕೆ ಎರಡು ಭಾಗಗಳಿರುವ ಹಿತ್ತಾಳೆ ಬಾಗಿಲು ಇದೆ. ಅದು ಆನೆ ಬಾಗಿಲು ಎಂದು ಸುಪರಿಚಿತವಾಗಿದೆ. ಗೇಟಿನ ಕೆಳಭಾಗದಲ್ಲಿ ಎರಡು ಆನೆಗಳ ಉಬ್ಬು ಚಿತ್ರಗಳಿವೆ. ಮೇಲಿನ ಭಾಗದಲ್ಲಿ ಸೂಕ್ಷ್ಮವಾದ ವರ್ಣವಿನ್ಯಾಸಗಳಿವೆ. ಇದರ ಮಧ್ಯದ ಮೇಲು ಭಾಗದಲ್ಲಿ ಮೈಸೂರು ರಾಜವಂಶದ ಲಾಂಛನವಾದ ಗಂಡ ಬೇರುಂಡ ಇದೆ. ಇದು ಕೂಡ ಲೋಹದ ಫಲಕದ ಮೇಲೆ ನಿರ್ಮಿಸಲಾಗಿರುವ ಉಬ್ಬು ಚಿತ್ರ ಫಲಕ. ಇದನ್ನು ಕಾಲ್ಪನಿಕ ಪ್ರಾಣಿ "ವ್ಯಾಳ" ಹಿಡಿದುಕೊಂಡಿದೆ. ಈ ಲಾಂಛನದ ತಳ ಭಾಗದಲ್ಲಿ ಮೈಸೂರು ದೊರೆಗಳ ಧ್ಯೇಯವಾಕ್ಯವಾದ "ಸತ್ಯಮೇವೋದ್ಧರಾಮ್ಯಹಂ" ನಾನು ಸತ್ಯವನ್ನು ಮಾತ್ರ ಎತ್ತಿಹಿಡಿಯುತ್ತೇನೆ" ಎಂಬ ಸಂಸ್ಕೃತ ಸೂಕ್ತಿ ಇದೆ. ಬಾಗಿಲುಗಳ ತಳ ಭಾಗದಲ್ಲಿ ತಯಾರಕರ ಹೆಸರನ್ನು ಸೂಚಿಸುವ BARTONSON & CO. DES"RS" ಎಂಬ

ಉಲ್ಲೇಖವಿದೆ. ಇವರು ಈ ಶತಮಾನದ ಆದಿಭಾಗದಲ್ಲಿ ಬೆಂಗಳೂರಿನಲ್ಲಿದ್ದ ಸುಪ್ರಸಿದ್ದ ವಿನ್ಯಾಸಗಾರರಾಗಿದ್ದರು.

ಹಿತ್ತಾಳೆ ಗೇಟಿನ ಪಾರ್ಶ್ವಗಳಲ್ಲಿ ಆನೆಯ ಮುಖಗಳ ಎರಡು ಸ್ಮಾರಿಕೆಗಳಿವೆ. ಇವನ್ನು ಮಹಾರಾಜರು ಮೈಸೂರು ಜಿಲ್ಲೆಯ ಚಾಮರಾಜನಗರ ಮತ್ತು ಗುಂಡ್ಲುಪೇಟೆ ಅರಣ್ಯಗಳಲ್ಲಿ 1955ರಲ್ಲಿ ಭೇಟಿಯಾಡಿದ್ದರು. ಇದರ ಕಾಲಾನಂತರದ ಯಾವುದೇ ಸ್ಮಾರಿಕೆ ನಮ್ಮ ಗಮನಕ್ಕೆ ಬರುವುದಿಲ್ಲ. ಇದು ಮಹಾರಾಜರು ಪ್ರಾಣಿಗಳ ಬೇಟೆಯನ್ನು ಕೈಬಿಟ್ಟಿದ್ದರೆಂಬುದನ್ನು ಸೂಚಿಸುತ್ತದೆ. ಅನಂತರ ಅವರು ವಿಶ್ವ ವನ್ಯ ಪ್ರಾಣಿ ಸಂರಕ್ಷಣಾ ಸಂಘದ ಅಧ್ಯಕ್ಷರಾದರು.

ಗೊಂಬೆತೊಟ್ಟಿಯ ಉತ್ತರ ಭಾಗದಲ್ಲಿಯೂ ಅನೇಕ ಗೊಂಬೆಗಳಿವೆ. ಇವು 19ನೇ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೆಯ ಶತಮಾನದ ಮೊದಲ ಭಾಗಕ್ಕೆ ಸೇರಿದುವು ಎನ್ನಬಹುದು. ಅವುಗಳಲ್ಲಿ ಅನೇಕವನ್ನು ಪಿಟೀಲುವಾದಕರು, ಚೌರಿವಾಹಕರು, ಕೃಷ್ಣ, ರುಕ್ಮಿಣಿ ಮತ್ತು ಸತ್ಯಭಾಮೆ ಮರದ ಹೊಟ್ಟಿನಿಂದ ಮಾಡಿ, ಅವಕ್ಕೆ ಬಣ್ಣ ಹಾಕಲಾಗಿದೆ. ಈ ವಿಭಾಗದಲ್ಲಿ ಇರುವ ಆಕರ್ಷಕ ವಸ್ತುಗಳ ಪೈಕಿ ಒಂದು ವಿಶಿಷ್ಟವಾದ ಕನ್ನಡಿಯ ಕುಶಲ ಕಲೆಯನ್ನು ಪ್ರದರ್ಶಿಸುವ ಮರದ ಮಂಟಪವಾಗಿದೆ. ರೆಕ್ಕೆಯಿರುವ ದೇವದೂತರನ್ನು ಸೂಚಿಸುವ ಮರದ ಎರಡು ಚಾಚು ವಿಗ್ರಹಗಳ ಸಮೇತ, ಇದರಲ್ಲಿ 12 ಮರದ ಕಂಬಗಳಿವೆ. ಈ ಬಾಲಕರ ಪ್ರತಿಮೆಗಳು ಚರ್ಚುಗಳಲ್ಲಿನ ದೇವತೆಗಳನ್ನು ನೆನಪಿಸುತ್ತವೆ. ಮಂಟಪಕ್ಕೆ ಪಂಚ ಕಲಶ ಸಮೇತವಾದ ಸುಂದರವಾದ ವಿಮಾನ ಪಂಕ್ತಿಯಿದೆ. ಮಂಟಪದ ಇಡೀ ರಚನೆಯು ಮೈಸೂರು ಕುಶಲ ಕೆಲಸಗಾರರ ಕಲೆಯ ಅತ್ಯುತ್ತಮ ಮಾದರಿಯಾಗಿದೆ.

## ಚಿನ್ನದ ಅಂಬಾರಿ

ಗೊಂಬೆ ತೊಟ್ಟಿಯ ಉತ್ತರದ ತುತ್ತ ತುದಿಯಲ್ಲಿ ಚಿನ್ನದ ಅಂಬಾರಿ ಇದೆ. ಈ ಅಂಬಾರಿಯ ಮುಖ್ಯಭಾಗ ಮಂಟಪದ ರೂಪದಲ್ಲಿರುವ ಒಂದು ಮರದ ರಚನೆಯಾಗಿದೆ. ಇದು ಸುರುಳಿಯಲಂಕಾರ, ಪರ್ಣ ಮತ್ತು ಪುಷ್ಪಗಳನ್ನು ಒಳಗೊಂಡ ಜಟಿಲವಾದ ವಿನ್ಯಾಸಗಳಿಂದ ಕೂಡಿರುವ ಚಿನ್ನದ ಫಲಕಗಳಿಂದ ಆವೃತವಾಗಿದೆ. ವಿನ್ಯಾಸಗಳನ್ನು ಉಬ್ಬು ಚಿತ್ರ ತಂತ್ರದಿಂದ ರೂಪಿಸಲಾಗಿದೆ. ಈ ಕಲೆಯಲ್ಲಿ ಮೈಸೂರು ಕುಶಲ ಕರ್ಮಿಗಳು ಸುಪ್ರಸಿದ್ಧರು. ಮರದಿಂದ ಮಾಡಲಾಗಿದ್ದು ಚಿನ್ನದ ಬಣ್ಣದಿಂದ ಲೇಪಿತವಾಗಿರುವ ಅಂಬಾರಿಯ ಈಗಿರುವ ಗೋಪುರಾಗ್ರ ಪಂಚ ಕಲಶಗಳನ್ನು ಪ್ರತಿನಿಧಿಸುತ್ತದೆ. ಗೋಪುರಾಗ್ರದ ಮುಂಭಾಗದಲ್ಲಿ ಬ್ಯಾಟರಿ ಚಾಲಿತ ಹಸಿರು ಮತ್ತು ಕೆಂಪು




ದೀಪಗಳಿವೆ. ದಸರಾ ಮೆರವಣಿಗೆಯಲ್ಲಿ ಮಹಾರಾಜರು ಮೆರವಣಿಗೆ ಮುಂದುವರಿಯಲು ಅಥವಾ ನಿಲ್ಲಿಸಬಯಸಿದಾಗ ಮಾವುತ ಈ ರೀತಿ ಮಾಡಲು ಈ ದೀಪಗಳು ನೆರವಾಗುತ್ತಿದ್ದುವು. ಅಂಬಾರಿಯು ಎರಡು ದಂತದ ಚೌರಿಗಳಿಂದ ಅಲಂಕೃತವಾಗಿದೆ. ಇವು ಜರಿತುದಿಯಿರುವಂಥ ಸುಂದರವಾದ ದಂತದ ಬಿರುಗೂದಲುಗಳಿಂದ ಕೂಡಿದುವಾಗಿವೆ.

ಅಂಬಾರಿಯನ್ನು ದಸರಾ ಮಹೋತ್ಸವದ ಅಂತಿಮ ದಿನವಾದ ವಿಜಯ ದಶಮಿಯಂದು ಬಳಸಲಾಗುತ್ತಿತ್ತು. ಅದನ್ನು ವರ್ಣಮಯವಾಗಿ ಅಲಂಕರಿಸಿದ, ಸಿಂಗಾರಗವುಸು ಹೊದಿಸಿದ ಆನೆಯ ಮೇಲೆ ಇಡಲಾಗುತ್ತಿತ್ತು. ಹಿಂದಿನ ಕಾಲದಲ್ಲಿ ಮಹಾರಾಜರು ತಮ್ಮ ಸೋದರ ಮತ್ತು ಸೋದರಳಿಯರೊಡನೆ ಅಂಬಾರಿಯಲ್ಲಿ ಕುಳಿತುಕೊಳ್ಳುತ್ತಿದ್ದರು. ದಸರೆಯಲ್ಲಿ ಚಿನ್ನದ ಅಂಬಾರಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ತೆರಳಿದ ಮೈಸೂರು ರಾಜವಂಶದ ಕಡೆಯ ದೊರೆ ಶ್ರೀ ಜಯಚಾಮರಾಜೇಂದ್ರ ಒಡೆಯರು.

ದಸರಾ ಮೆರವಣಿಯ ಪರಂಪರೆ ಇಂದಿಗೂ ಮುಂದುವರಿಯುತ್ತಿದೆ. ಆದರೆ, ಮೈಸೂರು ನಗರದ ಅಧಿಷ್ಠಾತ್ರಿ ದೇವತೆಯಾದ ಚಾಮುಂಡೇಶ್ವರಿಯ ವಿಗ್ರಹವನ್ನು ಚಿನ್ನದ ಅಂಬಾರಿಯಲ್ಲಿ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಗುತ್ತಿದೆ. ಸುಮಾರು 80 ಕಿಲೋಗ್ರಾಂ ಚಿನ್ನ ಬಳಸಿ ಈ ಅಂಬಾರಿಯನ್ನು ನಿರ್ಮಿಸಲಾಗಿದೆ.

## ಕಲ್ಯಾಣ ಮಂಟಪ

ಮುಂದೆ ಪ್ರಾಂಗಣದ ಪೂರ್ವಕ್ಕೆ ಇರುವ ಮಾರ್ಗದ ಮೂಲಕ ಸಂದರ್ಶಕರು ಕಲ್ಯಾಣ ಮಂಟಪದ ಸಭಾಂಗಣವನ್ನು ಪ್ರವೇಶಿಸುವರು. ಈ ಪ್ರಾಂಗಣದ ಪೂರ್ವದ ಮತ್ತು ಪಶ್ಚಿಮದ ಗೋಡೆಗಳು ಹಾಗೂ ಕಲ್ಯಾಣ ಮಂಟಪದ ಪೂರ್ವ, ದಕ್ಷಿಣ ಮತ್ತು ಪಶ್ಚಿಮದ ಗೋಡೆಗಳು ಮೈಸೂರಿನ ಪ್ರಖ್ಯಾತ ಅರಮನೆ ಕಲಾವಿದರಾದ ಕೆ. ಕೇಶವಯ್ಯ, ಎಸ್.ಎನ್. ಸ್ವಾಮಿ, ವೈ. ನಾಗರಾಜು ಎಸ್. ಶಂಕರರಾಜು, ಎಸ್.ಆರ್. ಐಯ್ಯಂಗಾರ್ ಮತ್ತು ವೈ. ಸುಬ್ರಮಣ್ಯರಾಜು ಮೊದಲಾದವರು ಬಿಡಿಸಿರುವ ತೈಲ ವರ್ಣಚಿತ್ರಗಳನ್ನು ಒಳಗೊಂಡಿದ್ದು ಪ್ರಸಿದ್ಧ ದಸರಾ ಮಹೋತ್ಸವವನ್ನು ಚಿರಸ್ಥಾಯಿಗೊಳಿಸಿವೆ.

ದಸರಾ ಮೆರವಣಿಗೆಯನ್ನು ಚಿತ್ರಿಸಿರುವ 26 ವರ್ಣ ಚಿತ್ರಗಳಿವೆ. ನಾಲ್ಕು ಬೇರೆ ಬೇರೆ ಚಿತ್ರಗಳೂ ಇವೆ. ಕಲ್ಯಾಣಮಂಟಪದ ದಕ್ಷಿಣ ಗೋಡೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ವರ್ಧಂತ್ಯುತ್ಸವದ ಮೆರವಣಿಗೆ, ದುರ್ಗಾ

ಪೂಜೆ ಅಥವಾ ಆಯುಧ ಪೂಜೆ ಪಶ್ಚಿಮದ ಅಂಗಳದಲ್ಲಿ ಚಾಮುಂಡೇಶ್ವರಿ ತೇರು ಮತ್ತು ಕೃಷ್ಣ ಜನ್ಮಾಷ್ಟಮಿ ಉತ್ಸವ. ದಸರಾ ಮಹೋತ್ಸವಗಳನ್ನು ಪ್ರತಿಬಿಂಬಿಸುವಂಥ ಈ ವರ್ಣ ಚಿತ್ರಗಳು ವಾಸ್ತವ ಛಾಯಾ ಚಿತ್ರಗಳನ್ನು ಆಧರಿಸಿದುವಾಗಿರುವುವು ಮತ್ತು 1934ರಿಂದ 1945ರ ಅವಧಿಯಲ್ಲಿ ಈ ವರ್ಣ ಚಿತ್ರಗಳು ರಚನೆಗೊಂಡಿವೆ.

ಗೋಡೆಯ ಮೇಲೆ ರಚಿಸಲಾಗಿರುವ ವರ್ಣ ಚಿತ್ರಗಳು ಅಶೋಕ ರಸ್ತೆಯ ಈ ಕೊನೆಯಲ್ಲಿರುವ ಮೈಸೂರು ಕೋಟೆಯ ಹೊರಗಿನಿಂದ ಕಾಣಬರುವ ಮೆರವಣಿಗೆಯನ್ನು ಚಿತ್ರಿಸಿವೆ. ಮೆರವಣಿಗೆಯಲ್ಲಿನ ಕೆಲವು ಹೆಗ್ಗುರುತುಗಳಿಂದಾಗಿ ಅನೇಕ ಭಿತ್ತಿ ಚಿತ್ರಗಳು ಗಮನಾರ್ಹವಾಗಿವೆ. ಉದಾಹರಣೆಗೆ 3ನೇ ಪಟ್ಟಿಕೆಯಲ್ಲಿ ಅಶೋಕ ರಸ್ತೆಯಲ್ಲಿನ ಸೇಂಟ್ ಫಿಲೋಮಿನಾ ಚರ್ಚ್‌ನ್ನು ಚಿತ್ರಿಸಿದೆ. ಚರ್ಚಿನ ಬಾಗಿಲಿನಲ್ಲಿನ ಪತಾಕೆಯಲ್ಲಿರುವ God Bless Our Maharaja (ನಮ್ಮ ಮಹಾರಾಜರನ್ನು ದೇವರು ಹರಸಲಿ) ಎಂಬುದು ಹೃದಯಸ್ಪರ್ಶಿಯದಾಗಿದೆ. ಪಟ್ಟಿಕೆ 10ರಲ್ಲಿ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಪಲ್ಲಕ್ಕಿಯಲ್ಲಿರುವ ಪಟ್ಟದ ಕತ್ತಿ ಇವು ಮೆರವಣಿಗೆ ಹೊರಟಿರುವುದು ಕಂಡುಬರುತ್ತದೆ. 13 ಮತ್ತು 14ನೇ ಪಟ್ಟಿಕೆಗಳಲ್ಲಿ ಸುಪ್ರಸಿದ್ಧರನೇಕರನ್ನು ಚಿತ್ರಿಸಲಾಗಿದೆ. ಪಟ್ಟಿಕೆ 13ರ ಬಲಭಾಗದಲ್ಲಿ ಇರುವವರು ಸಂಗೀತ ಕಲಾನಿಧಿ ಶ್ರೀ ಕೆ. ವಾಸುದೇವಾಚಾರ್, ವೈಣಿಕ ಪ್ರವೀಣ ಶ್ರೀ ಎಸ್. ಸುಬ್ಬಣ್ಣ, ವೈಣಿಕ ಪ್ರವೀಣ ಶ್ರೀ ಸಿ. ವೆಂಕಟಗಿರಿಯಪ್ಪ, ಗಾಯಕ ಶಿಖಾಮಣಿ ಶ್ರೀ ಮುತ್ತುಸ್ವಾಮಿ ಭಾಗವತರು (ಇವರೆಲ್ಲರೂ ಸಂಗೀತಗಾರರು) ಅರಮನೆ ಕಲಾವಿದ ಶ್ರೀ ಕೆ. ಕೇಶವಯ್ಯ, ಮಾಜಿ ಕೇಂದ್ರ ಸಚಿವ ಶ್ರೀ ಎಚ್.ಸಿ. ದಾಸಪ್ಪ ಮತ್ತು ಇತರರು. ಪಟ್ಟಿಕೆ 14ರಲ್ಲಿ ಇರುವವರು (ಮೈಸೂರಿನ ಇತರ ಪ್ರಮುಖರ ಪೈಕಿ) ವೈಣಿಕ ಶಿಖಾಮಣಿ ಶ್ರೀ ವೀಣೆಶೇಷಣ್ಣ ಮತ್ತು ಗಾನ ವಿಶಾರದ ಬಿಡಾರಂ ಕೃಷ್ಣಪ್ಪ. ಈ ಪಟ್ಟಿಕೆಯ ದಕ್ಷಿಣ ಭಾಗದಲ್ಲಿ ಇರುವ ಪ್ರಮುಖರ ಪೈಕಿ ಖ್ಯಾತ ಸಾಹಿತಿಯೂ, ಅರ್ಥಶಾಸ್ತ್ರ ವಿಶಾರದರೂ ಆದ ಮಹಾಮಹೋಪಾಧ್ಯಾಯ ಡಾ. ಆರ್. ಶಾಮಾ ಶಾಸ್ತ್ರಿ ಅವರೂ ಸೇರಿದ್ದಾರೆ. ಪಟ್ಟಿಕೆ 20 ಆಸಕ್ತಿಯದಾಗಿದೆ. ಇದು ರಾಜರ ಖಾಸಾ ಅಂಗರಕ್ಷಕರನ್ನು – ಹಳೆಪೈಕದವರು ಎಂದು ಇವರನ್ನು ಕರೆಯಲಾಗುತ್ತಿತ್ತು– ಚಿತ್ರಿಸಿದೆ. ಅವರು ತಮ್ಮ ಪ್ರಾಣವನ್ನೇ ಪಣವಾಗಿಟ್ಟು ದೊರೆಯ ಜೀವವನ್ನು ರಕ್ಷಿಸಲು ಸದಾ ಸಿದ್ಧರಾಗಿರುತ್ತಿದ್ದ ರಕ್ಷಕ ದಳವನ್ನು ಪ್ರತಿ ನಿಧಿಸುವವರಾಗಿದ್ದಾರೆ. ಅವರೆಲ್ಲರಿಗೂ ತಮ್ಮ ಮೀಸೆಗಳನ್ನು ಚೆನ್ನಾಗಿಟ್ಟುಕೊಂಡಿರಲು ವಿಶೇಷ ಭತ್ಯ ನೀಡಲಾಗುತ್ತಿತ್ತು ಎನ್ನಲಾಗಿದೆ.





ಈ ವರ್ಣ ಚಿತ್ರಗಳ ಪೈಕಿ ಪಟ್ಟಿಕೆ 19 ಅತ್ಯಂತ ವಿಶಿಷ್ಟವಾದುದಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಸೋದರ (ಶ್ರೀಕಂಠೀರವ ನರಸಿಂಹರಾಜ ಒಡೆಯರು ಹಾಗೂ ಸೋದರ ಸಂಬಂಧಿ ಶ್ರೀ ಜಯಚಾಮರಾಜ ಒಡೆಯರು) ಸಮೇತ ಅಲಂಕೃತ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಅರಮನೆಯ ಮುಂಭಾಗದಿಂದ ಮೆರವಣಿಗೆ ಹೊರಟಿರುವುದನ್ನು ಇದರಲ್ಲಿ ಚಿತ್ರಿಸಲಾಗಿದೆ. ಆನೆಯ ಮುಂಭಾಗದಲ್ಲಿ ಪುಷ್ಪವೃಷ್ಟಿ ಮಾಡಲಾಗಿದೆ. ಚಾಮುಂಡಿ ಬೆಟ್ಟ ಹಿನ್ನೆಲೆಯಾಗಿದೆ. ಪರಿಣತ ಕಲಾವಿದ ಕೆ. ಕೇಶವಯ್ಯನವರು ಪಟ್ಟಿಕೆಯನ್ನು ಕೌಶಲ್ಯದಿಂದ ಚಿತ್ರಿಸಿದ್ದಾರೆ ಇಡೀ ರಚನೆಗೆ ತ್ರಿಕೋನ ದೃಶ್ಯ ಪರಿಣಾಮವನ್ನು ತುಂಬಿರುವರು. ಭೇಟಿ ನೀಡುವ ವೀಕ್ಷಕರು ಪಟ್ಟಿಕೆಯ ಮುಂದೆ ಸಾಗಿದಂತೆ ಆನೆ, ರಾಜವಂಶದ ಗಣ್ಯರು ಮತ್ತು ದರ್ಬಾರಿನವರು ತಮ್ಮತ್ತಲ್ಲೇ ದಿಟ್ಟಿಸುತ್ತಿರುವಂತೆ ಅವರಿಗೆ ಕಾಣುತ್ತದೆ. ಈ ರೀತಿಯಲ್ಲಿ ವಿಜಯನಗರದ ದೊರೆಗಳು ಪ್ರಾರಂಭಿಸಿ ಮೈಸೂರು ಒಡೆಯರು ಚಿರಸ್ಮರಣೀಯಗೊಳಿಸಿದ ದಸರಾ ಉತ್ಸವಗಳನ್ನು ಈ ವರ್ಣ ಚಿತ್ರಪಟ್ಟಿಕೆಗಳು ಅಜರಾಮರಗೊಳಿಸಿವೆ.

ರಾಜರ ಕುಟುಂಬದ ಎಲ್ಲ ವಿವಾಹಗಳಿಗೆ ನಾಜೂಕಿನಿಂದ ರಚಿಸಲಾಗಿರುವ ಮತ್ತು ಅಲಂಕೃತವಾಗಿರುವ ಕಲ್ಯಾಣ ಮಂಟಪ ಸಭಾಂಗಣವಾಗಿತ್ತು. ಇದು 1912ರಲ್ಲಿ ಪೂರ್ಣಗೊಂಡಿತು ಮತ್ತು ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ ವಿವಾಹ ಇಲ್ಲಿ ನೆರವೇರಿತು. ಈಗಾಗಲೇ ಉಲ್ಲೇಖಿಸಿರುವಂತೆ ಅಷ್ಟಭುಜಾಕೃತಿ ಮಂಟಪ ಮತ್ತು ಮಯೂರ ಅಲಂಕರಣದ ಸಹಿತವಾದ ಬಣ್ಣದ ಗಾಜಿನ ಚಾವಣಿಯನ್ನು ಪ್ರಖ್ಯಾತ ವಾಲ್ಟರ್ ಮ್ಯಾಕ್ ಫರ್‌ಲೇನ್ ಸ್ಯಾರೆಸೆನ್ ಫೌಂಡ್ರಿ, ಗ್ಲಾಸ್ಗೋನಲ್ಲಿ ತಯಾರಿಸಲಾಗಿತ್ತು. ಈ ಸಭಾಂಗಣದ ಕೆಲವು ಇಂಗ್ಲಿಷ್ ಮೊಸಾಯಿಕ್ ಟೈಲ್ಸ್‌ನಿಂದ ಮಾಡಲಾದ ಮಯೂರ ವಿನ್ಯಾಸದಿಂದ ಕೂಡಿದೆ. ರಾಜರ ಅತಿಥಿಗಳು ಎಲ್ಲ ಕಲಾಪಗಳನ್ನು ವೀಕ್ಷಿಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಷ್ಟಕೋನಾಕೃತಿಯ ಸಭಾಂಗಣದಲ್ಲಿ ಒಂದು ಮೊಗಸಾಲೆಯನ್ನು ರೂಪಿಸಲಾಗಿದೆ. ಸಭಾಂಗಣದ ಸುತ್ತಲಿರುವ ಇತರ ಎಲ್ಲ ಸ್ತಂಭಗಳಲ್ಲಿ ಗ್ರಾನೈಟಿನ ಬೋದಿಗೆಗಳಿದ್ದು ಇವುಗಳಲ್ಲಿ ಗೀತೋಪದೇಶ, ವಾಮನ ಮತ್ತು ಬಲಿ, ಮೇನಕೆ ಮತ್ತು ಶಕುಂತಲೆಯರನ್ನು ಬಿಟ್ಟು ಹೋಗುತ್ತಿರುವ ವಿಶ್ವಾಮಿತ್ರ, ಸಾಕು ತಾಯಿ ಯಶೋಧೆಯೊಡನೆ ಇರುವ ಕೃಷ್ಣ ಮೊದಲಾದ ಪ್ರಸಂಗಗಳನ್ನು ಕೆತ್ತಲಾಗಿದೆ. ಅಶ್ವಗಳು, ಆನೆಗಳು ಮತ್ತು ಗೋವುಗಳು ಹಾಗೂ ರಾಜ ಲಾಂಛನ ಗಂಡ ಭೇರುಂಡ ಮೊದಲಾದವುಗಳ ಕೆತ್ತನೆಗಳೂ ಇವೆ. ಶಿಲ್ಪ ಕೆತ್ತನೆಗಳು ಮೈಸೂರು ಶಿಲ್ಪಕಲೆಯ ಪರಂಪರೆಯನ್ನು ಪ್ರಕಟಪಡಿಸುತ್ತವೆ.

## ಚಿತ್ರಶಾಲೆ

ರಾಜ ಮನೆತನದ ಅತ್ಯಮೂಲ್ಯವಾದ ಅನೇಕ ವರ್ಣಚಿತ್ರಗಳು ಮತ್ತು ಛಾಯಾಚಿತ್ರಗಳನ್ನು ಕಲ್ಯಾಣ ಮಂಟಪದ ದಕ್ಷಿಣಭಾಗದಲ್ಲಿರುವ ಚಿತ್ರಶಾಲೆಯಲ್ಲಿ ಪ್ರದರ್ಶಿಸಲಾಗಿದೆ.

ಸುಮಾರು 100 ವರ್ಷಗಳಷ್ಟು ಹಳೆಯದಾದ ಎರಡು ದೊಡ್ಡ ಛಾಯಾಚಿತ್ರಗಳೂ ಇಲ್ಲಿವೆ. ಅವುಗಳ ಪೈಕಿ ಒಂದರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು, ಅವರ ತಮ್ಮ ಕಂಠೀರವ ನರಸಿಂಹರಾಜ ಒಡೆಯರು ಮತ್ತು ಸೋದರಿಯರಾದ ಜಯಲಕ್ಷ್ಮಮ್ಮಣ್ಣಿ, ಕೃಷ್ಣರಾಜಮ್ಮಣಿ, ಮತ್ತು ಕೆಂಪಚೆಲುವರಾಜಮ್ಮಣ್ಣಿಯವರು ಇದ್ದಾರೆ. ಎರಡನೇ ಛಾಯಾಚಿತ್ರ ರಾಜಮಾತೆಯಾದ ವಾಣೀವಿಲಾಸ ಸನ್ನಿಧಾನ ಎಂಬ ನಾಮಧೇಯದಿಂದಲೇ ಸುವಿಖ್ಯಾತರಾದ ಕೆಂಪನಂಜಮ್ಮಣ್ಣಿಯವರದು, ರಾಜಮಾತೆಯಾದ ಇವರು ಆಧುನಿಕ ಮೈಸೂರು ಅರಮನೆಯ ಪುನರ್ ನಿರ್ಮಾಣಕ್ಕೆ ಕಾರಣರಾದವರೂ ಹೌದು. ಈ ಎರಡು ಛಾಯಾಚಿತ್ರಗಳನ್ನು ಸಿದ್ಧಪಡಿಸಿರುವವರು ಡೆಕ್ ಟ್ಯುಫೋ ಅಂಡ್ ಕಂಪನಿ (DEC TUFO & CO). ವಾಣೀವಿಲಾಸ ಸನ್ನಿಧಾನದ ಚಿತ್ರದಲ್ಲಿ 1897 ಎಂದು ಕಾಲ ನಮೂದಾಗಿದೆ.

ಚಿನ್ನ ಸಹಿತ ಜಲವರ್ಣದಲ್ಲಿ ರಚಿಸಲಾದ ಸೂಕ್ಷ್ಮ ಪ್ರತಿರೂಪ ವರ್ಣಚಿತ್ರ ಮುಮ್ಮಡಿ ಕೃಷ್ಣರಾಜ ಒಡೆಯರದು (ಕ್ರಿ.ಶ. 1799–1869) ಅವರ ಇಳಿವಯಸ್ಸಿನಲ್ಲಿ ಇದನ್ನು ರಚಿಸಲಾಗಿದೆ.

ಚಿತ್ರ ಪಟದ ಮೇಲಿನ ತೈಲವರ್ಣಚಿತ್ರ ಕಂಠೀರವ ನರಸಿಂಹರಾಜ ಒಡೆಯರದು. ಇದನ್ನು ಫಿಲಿಕ್ಸ್ ವಕ್ಲರ್ ರಚಿಸಿದ್ದಾರೆ. ಇದು ಇಪ್ಪತ್ತರ ವಯಸ್ಸಿನ ಯುವರಾಜರನ್ನು ಚಿತ್ರಿಸಿದೆ.

ಚಾಮರಾಜ ಒಡೆಯರ (1868–1894) ಬೃಹತ್ ಛಾಯಾಚಿತ್ರವನ್ನು ಚಿತ್ರಪಟದ ಮೇಲೆ ಅಂಟಿಸಲು ಅರಮನೆಯ ಛಾಯಾ ಚಿತ್ರಗ್ರಾಹಕರಾಗಿದ್ದ ಎ.ಆರ್. ವಾಸು ಅವರು ತೆಳುವಾದ ಬ್ರೋಮೈಡ್ ಪ್ರಿಂಟ್‌ಗಳನ್ನು ಬಳಸುವ ತಂತ್ರವನ್ನು ಅನುಸರಿಸಿದ್ದಾರೆ.

ಸುವಿಖ್ಯಾತ ರಾಜ ಕಲಾವಿದ ರಾಜಾ ರವಿವರ್ಮರ ಎರಡು ಕಲಾಕೃತಿಗಳನ್ನು ಚಿತ್ರಶಾಲೆಯಲ್ಲಿ ಹೆಮ್ಮೆಯಿಂದ ಪ್ರದರ್ಶಿಸಲಾಗಿದೆ. ಇದರ ಕಾಲ 1885 ಆಗಿರುತ್ತದೆ. ರಾಜ ಕಲಾವಿದರ ಸ್ವಹಸ್ತಾಕ್ಷರದಲ್ಲಿ "ರವಿವರ್ಮ ಕೋಯಿಲ್ ತುಮ್ಲುರಾನ್ 1885" (Revirama Coil Thumluran, 1885) ಎಂದು ನಮೂದಿಸಲಾಗಿದೆ. ಈ ಮಹಾನ್ ಕಲಾವಿದರ ಭಾವಚಿತ್ರಗಳ





ಪೈಕಿ ಒಂದು ನಾಲ್ವಡಿ ಕೃಷ್ಣರಾಜ ಒಡೆಯರದಾಗಿದೆ. ಆಗ ಅವರಿಗೆ ಒಂದು ವರ್ಷ ವಯಸ್ಸು; ತಮ್ಮ ಸೋದರಿಯರಾದ ಜಯಲಕ್ಷ್ಮಮ್ಮಣ್ಣಿಯವರು ಮತ್ತು ಕೆಂಪಚೆಲುವರಾಜಮ್ಮಣ್ಣಿಯವರ ಜೊತೆಯಾಗಿ ತಳ್ಳು ಬಂಡಿಯಲ್ಲಿ ಅವರು ಕುಳಿತಿರುವ ಚಿತ್ರ ಇದಾಗಿದೆ. ಕಿರಿಯ ಸೋದರಿಯ ಕೈಯಲ್ಲಿ ದಾರಕ್ಕೆ ಕಟ್ಟಲಾದ ಚಕ್ರದ ಮಣೆಯ ಮೇಲಿರುವ ಕುದುರೆಯ ಬೊಂಬೆ ಇದೆ.

ಮತ್ತೊಂದು ಭಾವಚಿತ್ರ ಮೆತ್ತೆಯ ಮೇಲೆ ಅಂಬೆಗಾಲಿಟ್ಟಿರುವ ಭಂಗಿಯಲ್ಲಿರುವ ಒಂದು ವರ್ಷದ ಮಗು ನಾಲ್ವಡಿ ಕೃಷ್ಣರಾಜ ಒಡೆಯರದಾಗಿದೆ. ರಾಜ ಶಿಶುವಿನ ಪಾರದರ್ಶಕ ಫ್ರಾಕನ್ನು ರಾಜಕಲಾವಿದರು ತುಂಬ ಸುಂದರವಾಗಿ ಬಿಡಿಸಿದ್ದಾರೆ. ಎರಡು ಚಿತ್ರಗಳೂ ಆ ಕಾಲದ ಶ್ರೀಮಂತ ಮಕ್ಕಳ ವಿಶಿಷ್ಟ ಆಭರಣಾದಿಗಳನ್ನು ಚಿತ್ರಿಸಿವೆ.

ಬ್ರಿಟಿಷ್ ದೊರೆ ಏಳನೆಯ ಎಡ್ವರ್ಡ್ ಮತ್ತು ಆತನ ರಾಣಿ ಅಲೆಕ್ಸಾಂಡ್ರಾ ಇವರ ಎರಡು ಬೃಹದ್ ಭಾವಚಿತ್ರಗಳು ಗಮನಾರ್ಹವಾಗಿವೆ. ಈ ಸ್ವಹಸ್ತಾಕ್ಷರಯುಕ್ತ ಭಾವ ಚಿತ್ರಗಳನ್ನು ಇಂಗ್ಲೀಷ್ ಕಲಾವಿದ ಹೆರಾಲ್ಡ್ ಸ್ಪೀಡ್ ರಚಿಸಿದ್ದು ಕಾಲ 1903 ಎಂದಿದೆ. ಚಿನ್ನದ ರೇಕಿನಿಂದ ಲೇಪಿಸಲಾದ, ಪ್ಲಾಸ್ಟರ್ ಆಫ್ ಪ್ಯಾರಿಸ್ ಅಚ್ಚು ಕೆಲಸವನ್ನು ಒಳಗೊಂಡಿರುವ ಮೂಲ ಮರದ, ಹಳೆಯ ಚೌಕಟ್ಟು ಇವುಗಳಲ್ಲಿದೆ. ಅವು ಮೂಲತಃ ಮೈಸೂರಿನ ಸರ್ಕಾರಿ ಭವನದಲ್ಲಿ ಇದ್ದವು. 1906ರಲ್ಲಿ ಆ ರಾಜ–ಅತಿಥಿಗಳು ಮೈಸೂರಿಗೆ ಭೇಟಿ ನೀಡಿದಾಗ ಈ ಭವನ ರಾಜನಿವಾಸವಾಗಿತ್ತು.

## ಸಮಕಾಲೀನ ಪೀಠೋಪಕರಣಗಳ ಕೊಠಡಿ

ಸಂದರ್ಶಕರು ಕಲ್ಯಾಣ ಮಂಟಪದಿಂದ ಪ್ರಾಂಗಣದ ಉತ್ತರದ ಮೊಗಸಾಲೆಯನ್ನು ಪ್ರವೇಶಿಸುವರು. ಈ ಮೊಗಸಾಲೆಯಲ್ಲಿ ಮೂರು ಕೊಠಡಿಗಳಿವೆ. ಈ ಮೊಗಸಾಲೆಯ ಪಶ್ಚಿಮದ ತುದಿಯ ಕೊಠಡಿಯನ್ನು ಆ ಕಾಲದ ಪೀಠೋಪಕರಣ ಕೊಠಡಿಯಾಗಿ ಪರಿವರ್ತಿಸಲಾಗಿದೆ. ರಾಜ ಲಾಂಛನ ಸಹಿತವಾದ ಎರಡು ಬೆಳ್ಳಿ ಕುರ್ಚಿಗಳು ಈ ಕೊಠಡಿಯ ಪ್ರಮುಖ ಆಕರ್ಷಣೆಯಾಗಿದೆ. ಈ ಕುರ್ಚಿಗಳನ್ನು ಮುಖ್ಯ ಸಮಾರಂಭಗಳಲ್ಲಿ ಬಳಸಲಾಗುತ್ತಿತ್ತು.

ಬೆಳ್ಳಿಯ ಕುರ್ಚಿಗಳ ಪೈಕಿ ಒಂದನ್ನು ಬಾರ್ಟನ್‌ಸನ್ ಅಂಡ್ ಕಂಪನಿ ಬೆಂಗಳೂರು (ಇದೇ ಕಂಪೆನಿ ಆನೆ ಬಾಗಿಲನ್ನು ನಿರ್ಮಾಣ ಮಾಡಿತ್ತು) ಈ ವಿನ್ಯಾಸಕಾರರು ತಯಾರಿಸಿದ್ದು. ಮತ್ತೊಂದನ್ನು ಟಿ.ಆರ್. ಟಾಕರ್ ಅಂಡ್ ಸನ್ಸ್ ಮದ್ರಾಸು ಎಂಬ ಸಂಸ್ಥೆ ತಯಾರಿಸಿದೆ. ಈ ಬೆಳ್ಳಿಯ ಕುರ್ಚಿಗಳ

ಪಕ್ಕಗಳಲ್ಲಿ, ಬೆಲ್ಜಿಯಮ್ಮಿನ ಸ್ಪಟಿಕದ ಗಾಜಿನಿಂದ ಮಾಡಲಾಗಿರುವ ಎರಡು ಕುರ್ಚಿಗಳು ಮತ್ತು ಅಮೃತ ಶಿಲೆಯ ಒಂದು ಜೊತೆ ಹೂದಾನಿಗಳಿವೆ. ಕನ್ನಡಿಗಳನ್ನೊಳಗೊಂಡಿರುವ ಅಲಂಕಾರದ ಎರಡು ಪ್ರಸಾದನ ಮೇಜುಗಳು ಇವೆ.

ರಾಜ ಮನೆತನದ ವಶದಲ್ಲಿ ಉತ್ತಮವಾದ ಒಂದು ಬೆಳ್ಳಿಯ ತೇರು ಇದೆ ಎಂಬುದನ್ನು ಕೂಡ ಈ ಸಂದರ್ಭದಲ್ಲಿ ಉಲ್ಲೇಖಿಸಬಹುದಾಗಿದೆ. ದಸರಾ ಸಮಯದಲ್ಲಿ ವಿಜಯದಶಮಿಯಂದು ಅರಮನೆಯಿಂದ ತ್ರಿನಯನೇಶ್ವರ ದೇವಸ್ಥಾನಕ್ಕೆ ಬಂದು ಹೋಗಲು ರಾಜ ವಂಶಜರು ವರ್ಷಕ್ಕೆ ಒಂದು ಸಲ ಈ ರಥವನ್ನು ಬಳಸುತ್ತಾರೆ. ಈ ರಥವನ್ನು ಮೈಸೂರಿನ ಕಲಾವಿದ ಸಿಂಗಣ್ಣಾಚಾರ್ಯರು ನಿರ್ಮಿಸಿದ್ದು, ಆತನಿಗೆ ಸ್ವರ್ಣನಿಪುಣ ಎಂಬ ಬಿರುದು ಇದ್ದಿತು. ಅವರ ಪುತ್ರ ಎಸ್.ಎನ್. ಸ್ವಾಮಿ ಕೂಡ ಸುಪ್ರಸಿದ್ಧ ಕಲಾವಿದರಾಗಿದ್ದು ದಸರಾ ಭಿತ್ತಿ ಚಿತ್ರಗಳ ಪೈಕಿ ಕೆಲವನ್ನು ಅವರು ರಚಿಸಿದ್ದಾರೆ.

ಈ ಕೊಠಡಿಯಲ್ಲಿರುವ ಮತ್ತೊಂದು ವಸ್ತು ಮೆರವಣಿಗೆ ಹೊರಡಲು ಸಿದ್ಧವಾಗಿರುವ ಅಲಂಕೃತ ಆನೆಯ ಮೇಲೆ ಇರಿಸಿರುವ ಚಿನ್ನದ ಅಂಬಾರಿಯಲ್ಲಿ ಮಹಾರಾಜರು ತಮ್ಮ ಸೋದರ ಮತ್ತು ಸೋದರಳಿಯನೊಡನೆ ಕುಳಿತಿರುವ ವರ್ಣಚಿತ್ರ. ಮೈಸೂರು ರಾಜ ಲಾಂಛನವಾದ ಹಿತ್ತಾಳೆ ಗಂಡ ಭೇರುಂಡವನ್ನು ಹೊತ್ತಿರುವ ಎರಡು ದಂತದ ಭವ್ಯ ಹಿಡಿಕೆಗಳು ಅದರ ಪಾರ್ಶ್ವಗಳಲ್ಲಿ ಇವೆ. ಇಡೀ ಚೌಕಟ್ಟು ತೇಗದ ಮರದ ಸಂದೂಕದ ಆಕಾರದ ಆಧಾರ ಪೀಠದ ಮೇಲಿದೆ. ಈ ಆಧಾರಪೀಠವನ್ನು ಬೀಟೆ ಮರದಿಂದ ಮಾಡಲಾಗಿದ್ದು, ಅದು ಸುಂದರವಾಗಿ ಕೆತ್ತಲಾದ ಎಲೆಗಳ ವಿನ್ಯಾಸವನ್ನು ಒಳಗೊಂಡಿದ್ದು, ದಂತದ ಹಿಡಿಕೆಗಳಿಂದ ಕೂಡಿದೆ ಮತ್ತು ವರ್ಣಚಿತ್ರದ ಅಂಡಾಕಾರದ ರಚನೆಗೆ ಆಸರೆಯಾಗಿದೆ. ಆಧಾರ ಪೀಠದ ಮುಂಭಾಗ ಮತ್ತು ಪಾರ್ಶ್ವಗಳಲ್ಲಿ ಅರಮನೆಯ ವಿನ್ಯಾಸದ ಯಥಾ ದೃಶ್ಯವನ್ನು ನೀಡುವಂತೆ ಚೆನ್ನಾಗಿ ಕೆತ್ತನೆಯ ಕೆಲಸ ಮಾಡಲಾಗಿದೆ. ಉಬ್ಬು ಶಿಲ್ಪ ರೀತಿಯಲ್ಲಿ ಕೆತ್ತಲಾಗಿರುವ ಇಬ್ಬರು ದ್ವಾರಪಾಲಕರ ಮತ್ತು ಎರಡು ಆನೆಗಳ ಚಿತ್ರಗಳೂ ಇವೆ. ಈ ಆನೆಗಳಲ್ಲಿ ಒಂದು ಚಾಮರವನ್ನು ಹಿಡಿದುಕೊಂಡಿದ್ದರೆ, ಮತ್ತೊಂದು ಪುಷ್ಪವೃಷ್ಟಿ ಮಾಡುತ್ತಿದೆ. ಸಂದರ್ಶಕರು ಈ ಕೊಠಡಿಯಿಂದ ಹೊರಬರುವಾಗ ಉಬ್ಬು ಕನ್ನಡಿಯಲ್ಲಿ ತಮ್ಮ ಮುಖವನ್ನು ನೋಡಿಕೊಳ್ಳಬಹುದು. ಅದು ಆಕೃತಿಯನ್ನು ವಿರೂಪಗೊಳಿಸುತ್ತದೆ. ಇದರಿಂದ ಒಂದು ರೀತಿಯ ವಿನೋದಭಾವ ಮೂಡುತ್ತದೆ.





ಈ ಕೊಠಡಿಯ ಚಾವಣಿ ಕೂಡ ಗಮನಾರ್ಹವಾಗಿದೆ. ಇಡೀ ಚಾವಣಿಯು ಬರ್ಮಾದ ತೇಗದ್ದಾಗಿದ್ದು, ಸುಂದರವಾದ ಪುಷ್ಪಾಲಂಕಾರದ ಕೆತ್ತನೆಗಳಿಂದ ಕೂಡಿದೆ. ಈ ಕೆತ್ತನೆಗಳನ್ನು ಮಾಡಿರುವವರು ಮೈಸೂರು ಕಲಾವಿದರು.

## ಸ್ಮಾರಿಕೆ ಕೊಠಡಿ

## (ಸಾರ್ವಜನಿಕ ವೀಕ್ಷಣೆಗೆ ಇನ್ನೂ ಲಭ್ಯವಿಲ್ಲ)

ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರು ಶಿಕಾರಿ ಮಾಡಿದ್ದರ ಕುರುಹಾದ ಕೆಲವು ಸ್ಮಾರಿಕೆಗಳು ಮಧ್ಯದ ಕೊಠಡಿಯಲ್ಲಿ ಇವೆ. ಅಂತರಾಷ್ಟ್ರೀಯ ಖ್ಯಾತಿಯ ಚರ್ಮ ಪ್ರಸಾದನ ತಜ್ಞರಾದ ಮೆಸರ್ಸ್ ವ್ಯಾನ್ ಇಂಗೆನ್ ಮತ್ತು ವ್ಯಾನ್ ಇಂಗೆನ್, ಮೈಸೂರು ಇವರು ಈ ಚರ್ಮ ಪ್ರಸಾದನ ಕಾರ್ಯವನ್ನು ಮಾಡಿರುವರು. ಈ ಸಂಗ್ರಹದಲ್ಲಿ ಮೈಸೂರಿನ ಸುತ್ತಮುತ್ತಣ ಅರಣ್ಯ ಪ್ರದೇಶದಲ್ಲಿ ಶಿಕಾರಿ ಮಾಡಲಾದ ಹುಲಿಗಳು, ಕಾಟಿಗಳು, ಆನೆ, ಚಿರತೆಯ ತಲೆಗಳು ಸೇರಿವೆ. ಜೋಡಿ ಕೊಂಬಿನ ಘೇಂಡಾಮೃಗ ಮತ್ತು ಕಾಡುಕೋಣ ಹೇಸರಗತ್ತೆ ಮತ್ತು ಜಿರಾಫೆ ಇವು ಆಫ್ರಿಕ ಮೂಲದವಾಗಿವೆ. ಇವು ಆಫ್ರಿಕನ್ ಸಫಾರಿಯ ಸಮಯದಲ್ಲಿ ಮಹಾರಾಜರಿಗೆ ನೀಡಲಾದ ಬಳುವಳಿಗಳಾಗಿವೆ. ಇಲ್ಲಿನ ಕುತೂಹಲಕಾರಿ ಸ್ಮಾರಕಗಳಲ್ಲಿ ಮಹಾರಾಜರ ಪ್ರೀತಿಯ ನಾಯಿ ಬ್ರುಮೆಲ್ ಕೂಡ ಸೇರಿದೆ. ಇದು ಸುಮಾರು ನಾಲ್ಕೂವರೆ ವರ್ಷಗಳು ಜೀವಂತವಾಗಿದ್ದ ಮ್ಯಾಸ್ಟಿಫ್ ಜಾತಿಯ ದೊಡ್ಡನಾಯಿ.

## ಆಯುಧ ಶಾಲೆ

## (ಸಾರ್ವಜನಿಕ ವೀಕ್ಷಣೆಗೆ ಇನ್ನೂ ತೆರೆದಿಲ್ಲ)

ಮೈಸೂರು ಅರಮನೆಯ ಆಯುಧ ಶಾಲೆಯಲ್ಲಿ ಎಲ್ಲ ಬಗೆಯ ಹಳೆಯ ಆಯುಧಗಳ ಉತ್ತಮ ಸಂಗ್ರಹಣೆಯಿದೆ. ವಾಸ್ತವವಾಗಿ ಇಲ್ಲಿ ನೂರು ವರ್ಷಗಳಿಗೂ ಹೆಚ್ಚಿನ ಅವಧಿಯ ಸಂಗ್ರಹವಿದೆ. ಸದ್ಯ ಅಲ್ಲಿರುವ ಆಯುಧಗಳ ಸಂಖ್ಯೆ 725. ಕಳೆದ ಶತಮಾನದಲ್ಲಿ ಅದರ ಸಂಖ್ಯೆ 1300ರಷ್ಟಿತ್ತು ಎನ್ನಲಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಎಲ್ಲ ಆಯುಧಗಳ ವಿವರಗಳ ಪಟ್ಟಿ (ತಪಶೀಲು ಯಾದಿ) ತಯಾರಿಸಿ, ಪ್ರತಿಯೊಂದಕ್ಕೂ ಕ್ರಮ ಸಂಖ್ಯೆಯನ್ನು ಒಳಗೊಂಡ ಲೋಹದ ಪಟ್ಟಿಯನ್ನು ಕಟ್ಟಿಸಿದರು. ಅವುಗಳ ಪೈಕಿ ಪ್ರತಿಯೊಂದರ ಮೇಲೂ ಕನ್ನಡದಲ್ಲಿ 'ಶ್ರೀ ಕೃಷ್ಣ' ಎಂಬ ಅಂಕಿತವನ್ನು ಬರೆಸಲಾಗಿತ್ತು.

ಅರಮನೆ ಆಯುಧ ಶಾಲೆಯ ಆಯುಧಗಳ ಒಳ್ಳೆಯ ವಿವರಣೆ 'ಮೈಸೂರು ಗೆಜೆಟಿಯರ್'ನಲ್ಲಿ ಇದ್ದು ಅದು ಉಲ್ಲಾಖಾರ್ಹವಾಗಿದೆ.

ಅವುಗಳ ಪೈಕಿ ಅನೇಕವು ಐತಿಹಾಸಿಕ ದೃಷ್ಟಿಕೋನದಿಂದಲೂ ಕಲಾತ್ಮಕ ದೃಷ್ಟಿಕೋನದಿಂದಲೂ ಕುತೂಹಲಕಾರಿಯಾಗಿವೆ. 198ನೇ ಸಂಖ್ಯೆಯಿರುವ ಮತ್ತು 'ನಿಮ್‌ಚಾ' ಎಂಬ ನಾಮಾಂಕಿತದ ಸ್ಥಿತಿಸ್ಥಾಪಕ ಶಕ್ತಿಯುಳ್ಳ ಕತ್ತಿ ಇದನ್ನು ಸೊಂಟಪಟ್ಟಿಯಾಗಿಯೂ ಧರಿಸಬಹುದಾಗಿತ್ತು. ಮೈಸೂರು ದೊರೆ ಕಂಠೀರವ ನರಸಿಂಹರಾಜ ಒಡೆಯರಿಗೆ (1638–1659) ಸೇರಿದುದು ಎನ್ನಲಾಗಿದೆ. ಇದು ಆಯುದಶಾಲೆಯಲ್ಲಿರುವ ಅತ್ಯಂತ ಪ್ರಾಚೀನ ಆಯುದಗಳ ಪೈಕಿ ಒಂದು. ಛುರಾ ಡೇ 2' (chura-de 2) ಎಂಬ ಅಂಕಿತದ ಬಾಕು 1672 ರಿಂದ 1704ರವರೆಗೆ ಮೈಸೂರನ್ನು ಆಳಿದ ಮೈಸೂರಿನ ಮತ್ತೊಬ್ಬ ದೊರೆಯಾದ ಚಿಕ್ಕದೇವರಾಜ ಒಡೆಯರಿಗೆ ಸೇರಿದುದು ಎನ್ನಲಾಗಿದೆ. 35ನೇ ಸಂಖ್ಯೆಯುಳ್ಳ ಮತ್ತು 'ನಿಮ್ಮ್‌ಚಾ' (buncga) ನಾಮಾಂಕಿತ ಇನ್ನೊಂದು ಕತ್ತಿಯನ್ನು ಮತ್ತು ಸನ್ವ sanva ನಾಮಾಂಕಿತದ ಮತ್ತೊಂದು ಭಾರೀ ಕತ್ತಿಯನ್ನು ಕ್ರಮವಾಗಿ ಹೈದರ್ ಮತ್ತು ಟೀಪೂ ಬಳಸುತ್ತಿದ್ದರೆನ್ನಲಾಗಿದೆ. 'ಪೇಷ್ ಕಬ್ಜ್' ಎಂಬ ಪಟ್ಟಿಕೆಯಿರುವ ಚೂರಿಯ ಅಂಕಿತದಿಂದ ಅದನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಬಳಸುತ್ತಿದ್ದರೆಂದು ತೀರ್ಮಾನಿಸಬಹುದು. 'ಹೆರಿಗೆ ಕತ್ತಿ' ಎಂದು ಕರೆಯಲಾಗುವ ಮತ್ತೊಂದು ಚೂರಿಯ ಮೇಲೆ 'ಖಾಸ' ಎಂಬ ಅಂಕಿತವಿದ್ದು, ಅದನ್ನು ಆ ರಾಜರ ಕಾಲದಲ್ಲಿ ಅರಮನೆಯಲ್ಲಿ ಪ್ರಾಯಶಃ ಬಳಸುತ್ತಿದ್ದಿರಬಹುದು. 'ಹೆರಿಗೆ ಕತ್ತಿ'ಗಳನ್ನು ಯಾವುದೇ ಶಸ್ತ್ರಕ್ರಿಯೆಗಳಿಗಾಗಿ ಬಳಸುವ ಉದ್ದೇಶವಿರಲಿಲ್ಲವೆಂಬುದನ್ನು ಇಲ್ಲಿ ಉಲ್ಲೇಖಿಸಬಹುದು. ಅವನ್ನು ಸುರಕ್ಷಿತ ಹಾಗೂ ಶೀಘ್ರ ಹೆರಿಗೆಗಾಗಿ ಹೆರಿಗೆ ಮನೆಯಲ್ಲಿ ಪೂಜಿಸುತ್ತಿದ್ದರು. ಅಷ್ಟೇ ಆಯುಧಗಳ ಮೇಲೆ ಕಂಡುಬರುವ ಹೆಸರುಗಳ ಪೈಕಿ ಉಲ್ಲೇಖಾರ್ಹವಾದುವು. ಮುದ್ಗರ, ಸುರಾಯಿ, ಬುರುಜ, ಜಂಬ್ಯ ಬಾಕು, ಪಂಚ ಕಠಾರಿ, ಸಬ್ಬರ ಬಿರುದಂಗಿ ಛುರಾ ಚೂರಿ, ತಬ್ಬರ, ಬಾಗ್‌ನಖಾ, ಗದ್ದರ, ಖಂಡ್ವ, ಅಬ್ಬಸಿ, ಸೈಪು, ಮದು, ಸೋಸನ, ಅಲೆಮನ್, ಪರಂಗ, ಸಿಂಗೋಟಿ ಮತ್ತು ಭರ್ಜಿ. ಅನೇಕ ಆಯುಧಗಳಿವೆ. ಅವುಗಳ ಪೈಕಿ ಮೂರರ ಮೇಲೆ ಮುಮ್ಮಡಿ ಕೃಷ್ಣರಾಜ ಒಡೆಯರನ್ನು, 1799ರ ಜೂನ್ 30 ರಂದು ಮೈಸೂರಿನಲ್ಲಿ 'ಮಸನದ್ದಿ'ನಲ್ಲಿ ಕೂರಿಸಲಾಯಿತು ಎಂಬ ಶಾಸನವಿದೆ. ಮತ್ತೊಂದರ ಮೇಲಿರುವ ಶಾಸನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಜೊತೆಗೆ ಹೈದರ್, ಟೀಪೂ, ಪೂರ್ಣಯ್ಯ, ನಂಜರಾಜ, ದೇವರಾಜ, ಲ್ಯಾಲಿ ಮತ್ತು ಮೀರ್ ಮುಹಮ್ಮದ್ ಸಾದಕ್‌ರನ್ನು ಹೆಸರಿಸಿದೆ. ಮತ್ತೊಂದರ





ಮೇಲಿರುವ ಶಾಸನ ಆ ಫಿರಂಗಿ ಆರ್ಥರ್ ವೆಲ್ಲೆಸ್ಲಿಯು 1803ರಲ್ಲಿ ಬಿಜಾಪುರದ ಮೂಲ್ಕಿ ಮೈದಾನವನ್ನು (The Moolke Maidan of Bijapur) ಸ್ವಾಧೀನ ಪಡಿಸಿಕೊಂಡಿದ್ದರ ಪ್ರತೀಕವಾಗಿದೆ. ಇದೇ ರೀತಿ ಆಯುಧಶಾಲೆಯಲ್ಲಿ ಎರಡು ಚೌರಿಗಳನ್ನು ಇಡಲಾಗಿದ್ದು, ಒಂದರ ಮೇಲೆ ಇದನ್ನು ಲಾರ್ಡ್ ಡಾಲ್ ಹೌಸಿಯು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಬಳುವಳಿಯಾಗಿ ಕಳುಹಿಸಿದ್ದರ ಬಗ್ಗೆ ಅಂಕಿತವಿದೆ. ಗಮನಾರ್ಹವಾದ ಮತ್ತೊಂದು ವಸ್ತುವೆಂದರೆ ಸಣ್ಣ ಗೋಪುರವಿರುವ ಕಪ್ಪುಶಿಲೆಯ ನಾಲ್ಕು ಕಂಬಗಳಿರುವ ಸಣ್ಣ ಮಂಟಪ. ಈ ಮಂಟಪದ ಒಳಭಾಗದಲ್ಲಿ ಆಸೀನನಾಗಿರುವ ಗಣಪತಿಯನ್ನು ಕಾಣಬಹುದು.

## ದರ್ಬಾರು ಸಭಾಂಗಣ

ವರ್ಣಚಿತ್ರ ಪಟ್ಟಿಕೆಗಳ ಮೂಲಕ ದಸರೆಯ ವೈಭವದ ವಿಶಿಷ್ಟವಾದ ಕಲ್ಯಾಣ ಮಂಟಪ ಸೌಂದರ್ಯದ ಹಾಗೂ ಆ ಕಾಲದ ಪೀಠೋಪಕರಣ ಕೊಠಡಿಯಲ್ಲಿನ ದೃಶ್ಯಗಳ ಆನಂದವನ್ನು ಸವಿದ ಬಳಿಕ, ಸಂದರ್ಶಕರು ಅಮೃತಶಿಲೆಯ ಸೋಪಾನ ಪಂಕ್ತಿಗಳನ್ನುಳ್ಳ ಸೋಪಾನವನ್ನೇರಿ ದರ್ಬಾರು ಸಭಾಂಗಣವನ್ನು ಪ್ರವೇಶಿಸುತ್ತಾರೆ. ಸೋಪಾನಗಳಿಗಾಗಿ ಬಳಸಲಾಗಿರುವ ಅಮೃತಶಿಲೆ ಸ್ಥಳೀಯವಾದುದೇ ಆದರೂ, ಎರಡು ಪಾರ್ಶ್ವಗಳಲ್ಲಿರುವ ಹೂಜಿಗಂಬಗಳಲ್ಲಿ ಇಟಲಿಯ ಅಮೃತ ಶಿಲೆಯ ಸುಂದರವಾದ ಕೆತ್ತನೆ ಕಂಬಗಳಿದ್ದು ಅವುಗಳ ಮೇಲೆ ಪಾರ್ಸ್ಲಿರಿ ಸ್ಫಟಿಕ ಶಿಲೆಗಳಿಂದ ಮಾಡಿದ ಕಿರು ಶಿಲ್ಪಗಳನ್ನು ಅಳವಡಿಸಲಾಗಿದೆ. ಮೊದಲ ಸೋಪಾನ ಚೌಕಿಯಲ್ಲಿನ ಮೂಲೆಯಲ್ಲಿ, ಆಮದು ಮಾಡಿಕೊಳ್ಳಲಾಗಿರುವ ಎತ್ತರವಾದ ಫ್ರೆಂಚ್ ದೀಪದ ಕಂಬಗಳಿವೆ. ಇವು ಈಜಿಪ್ಟಿಯನ್ ಕಿರುಪುತ್ತಳಿಗಳ ಪ್ರತೀಕವಾಗಿವೆ.

ಭೇಟಿ ನೀಡುವವರಿಗೆ ದರ್ಬಾರು ಸಭಾಂಗಣವನ್ನು ಪ್ರವೇಶಿಸುವ ಮೊದಲು ಸೋಪಾನ ಚೌಕಿಯನ್ನು ತಲುಪಿದಾಗ ತಮ್ಮತ್ತಲೇ ದಿಟ್ಟಿಸುತ್ತಿರುವ, ಕುಳಿತಿರುವ ಭಂಗಿಯಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ, ಆಳೆತ್ತರದ ಪ್ರತಿಮೆ ಎದುರಾಗುತ್ತದೆ. ಈ ಪ್ಲ್ಯಾಸ್ಟರ್ ಆಫ್ ಪ್ಯಾರಿಸ್ ಪ್ರತಿಮೆಯನ್ನು ಮಾಡಿರುವವರು ಅರಮನೆ ಕಲಾಕಾರರಾದ ಬಿ. ಬಸವಯ್ಯನವರು. ಅವರ ಸಮೀಪದಲ್ಲಿ ಅವರ ನೆಚ್ಚಿನ ನೇಮಕ ಜಮೇದಾರ್ ಪೀರ್ ಬೇಗರ 'ಕಟೌಟ್' ರೂಪದ ಛಾಯಾಚಿತ್ರವಿದೆ.

ಬಳಿಕ ಸಂದರ್ಶಕರು ಬೋದಿಗೆಗಳಿಂದ ಕೂಡಿ ಸಾಲುಗಂಬಗಳ ದರ್ಬಾರ್ ಸಭಾಂಗಣವನ್ನು ಪ್ರವೇಶಿಸುವರು. ಇದು ಸಂದರ್ಶಕರನ್ನು

ಮೂಖವಿಸ್ಮಿತರನ್ನಾಗಿ ಮಾಡುವಂತಿದೆ. ಮಹಾರಾಜರು ದಸರಾ ಉತ್ಸವಗಳಲ್ಲಿ ಆಹ್ವಾನಿತರ ಸಮ್ಮುಖದಲ್ಲಿ ದರ್ಬಾರು ನಡೆಸಲು ಉಪಯೋಗಿಸುತ್ತಿದ್ದ ದರ್ಬಾರು ಸಭಾಂಗಣವೇ ಇದು. ಈ ದರ್ಬಾರು ಸಂಜೆಯ ವೇಳೆ ನಡೆಯುತ್ತಿತ್ತು. ವಿದ್ಯುದ್ದೀಪಾಲಂಕೃತವಾದ ಅರಮನೆಯ ಮುಂದಿನ ಅಂಗಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಈಗ ದಸರಾ ಸಮಯದಲ್ಲಿ ರಾಜ್ಯ ಸರಕಾರ ಇಲ್ಲಿ ಸಂಗೀತೋತ್ಸವಗಳನ್ನು ವ್ಯವಸ್ಥೆಗೊಳಿಸುತ್ತದೆ. ಇವುಗಳಲ್ಲಿ ರಾಷ್ಟ್ರೀಯ ಕಲಾವಿದರು ಪಾಲ್ಗೊಳ್ಳುತ್ತಾರೆ. ವಿದ್ಯುದೀಪಾಲಂಕೃತ ಅರಮನೆಯ ಮುಂಭಾಗದಲ್ಲಿ ಪೋಲಿಸು ಸಮೂಹ ವಾದ್ಯ ಕಾರ್ಯಕ್ರಮ ನಡೆಯುತ್ತದೆ. ಇದನ್ನು ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿನ ವಿಜಯ ಚೌಕ್‌ನಲ್ಲಿ ನಡೆಯುವ 'ಬೀಟಿಂಗ್ ದಿ ರಿಟ್ರೀಟ್'ಗೆ ಹೋಲಿಸಬಹುದು. ಸಂಪ್ರದಾಯಪಾಲನೆಗಾಗಿ ಸಂಗೀತ ಸಭಾಗಳು ಪ್ರಾರಂಭವಾಗುವ ಮೊದಲು, ಜಾನಪದ ಕಲಾಪ್ರದರ್ಶನಗಳು ಕೂಡ ಅರಮನೆಯ ಮುಂದಿನ ಬಯಲಿನಲ್ಲಿ ವ್ಯವಸ್ಥೆಗೊಳಿಸಿರುತ್ತಾರೆ.

ದರ್ಬಾರ್ ಸಭಾಂಗಣಕ್ಕೆ ಮತ್ತೆ ಹಿಂದಿರುಗೋಣ. ಇಲ್ಲಿ ರಾಜಾ ರವಿವರ್ಮ ಮತ್ತು ಮೈಸೂರಿನ ಪ್ರಖ್ಯಾತ ಶಿಲ್ಪಿ ಸಿದ್ಧಲಿಂಗಸ್ವಾಮಿ ರಚಿಸಿರುವ ಸುಪ್ರಸಿದ್ಧ ವರ್ಣಚಿತ್ರಗಳು ಇವೆ. ಇವರ ಬಗ್ಗೆ ಈಗಾಗಲೇ ಉಲ್ಲೇಖಿಸಲಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಆರಂಭಿಸಿ ಮೈಸೂರು ದೊರೆಗಳ ನಾಲ್ಕು ತಲೆಮಾರುಗಳನ್ನು ಚಿತ್ರಿಸಿರುವ ಮಧ್ಯದ ಪಟ್ಟಿಕೆಯನ್ನು ಖ್ಯಾತ ಕಲಾಕಾರ ಶ್ರೀ ವೈ. ನಾಗರಾಜು ಚಿತ್ರಿಸಿರುವರು. ಈ ಪಟ್ಟಿಕೆಯ ಎರಡು ಪಾರ್ಶ್ವಗಳಲ್ಲಿ ದೇವತೆಗಳಾದ ಸರಸ್ವತಿ ಮತ್ತು ಲಕ್ಷ್ಮಿಯರ ವರ್ಣ ಚಿತ್ರಗಳಿವೆ. ಇವನ್ನು ಶ್ರೀ ಸಿದ್ಧಲಿಂಗಸ್ವಾಮಿಯವರು 1940ರ ದಶಕದಲ್ಲಿ ರಚಿಸಿದ್ದಾರೆ. ಎಲ್ಲ ವರ್ಣ ಚಿತ್ರಗಳಿಗೆ ಸುಂದರವಾದ ಮರದ ಕೆತ್ತನೆಯನ್ನುಳ್ಳ ಚೌಕಟ್ಟುಗಳಿದ್ದು, ಅವುಗಳ ಪಾರ್ಶ್ವಗಳಲ್ಲಿ ಇಟಲಿಯ ಅಮೃತ ಶಿಲೆಯ ಗೋಡೆಗಂಬಗಳಿವೆ. ವರ್ಣ ಚಿತ್ರಗಳನ್ನು ಸುತ್ತುವರಿದಿರುವ ಕಮಾನು ಮತ್ತು ಕೆಳಗಿನ ನೆಲ ಸುಂದರವಾದ ಪುಷ್ಪ ಹಾಗೂ ಪರ್ಣರಾಜಿಯ ವಿನ್ಯಾಸಗಳನ್ನು ಹೊಂದಿರುವಂತ ಕಾರ್ನೀಲಿಯನ್ (ಕೆಂಪು ಛಾಯೆಯಿಂದ ಬಿಳಿಯ ಕ್ಯಾಲ್ಸಡೆನಿ ಪ್ರಶಸ್ತಿ ಶಿಲೆ) ರಕ್ತ ಮಣಿ (ಪದ್ಮರಾಗ), ಜ್ಯಾಸ್ಪರ್, ಜೇಸಿಂತ್, ಕಾರೂಬಮಣಿ, ವೈಡೂರ್ಯ, ಮೊದಲಾದ ಅರೆ ಪ್ರಶಸ್ತ ಶಿಲೆಗಳನ್ನು ಒಳಗೊಂಡಿದೆ. ಮುಂದೆ ಸಂದರ್ಶಕರು ಸ್ತಂಭಾಕೃತಿಗಳಿಂದ ರೂಪಿತವಾಗಿರುವ ಕಮಾನುಗಳನ್ನು ಹಾದು ದರ್ಬಾರು ಸಭಾಂಗಣದ ಮುಂಭಾಗವನ್ನು ಪ್ರವೇಶಿಸುತ್ತಾರೆ. ಸಾಲು ಗಂಬಗಳ ಒಟ್ಟಾರೆ ಪರಿಣಾಮ ಸಂದರ್ಶಕರನ್ನು




ಮಂತ್ರಮುಗ್ಧರನ್ನಾಗಿಸುತ್ತದೆ. ವಾಸ್ತವವಾಗಿ ಕಾನ್ಸ್ಟೆನ್ಸ್ ಇ ಪಾರ್ಸನ್ಸ್ ಈ ರೀತಿ ಉದ್ಗರಿಸಿದ್ದಾರೆ. "ಈ ಶ್ರೇಷ್ಠ ದರ್ಬಾರು ಸಭಾಂಗಣದ ಸೊಬಗು, ಬಳಸಿರುವ ವಸ್ತುವೈವಿಧ್ಯ, ವರ್ಣೋಜ್ವಲತೆ ಮತ್ತು ಅಲಂಕರಣ ಸಮೃದ್ಧಿಗಳ ಬಗೆಗಿನ ಯಾವುದೇ ಸಂಕ್ಷಿಪ್ತ ನಿರೂಪಣೆ ಇದಕ್ಕೆ ನ್ಯಾಯವನ್ನು ದೊರಕಿಸಲಾರದು".

ದರ್ಬಾರು ಸಭಾಂಗಣದ ಉತ್ತರ ಮತ್ತು ದಕ್ಷಿಣ ತುದಿಗಳಲ್ಲಿ ಅಲಂಕಾರಿಕ ಪುಷ್ಪ ವಿನ್ಯಾಸ ಸಹಿತವಾದ ಎರಡು ಬೃಹದ್ ಪಿಂಗಾಣಿ ಹೂದಾನಿಗಳನ್ನು ಇಡಲಾಗಿದೆ. ಅವುಗಳ ಮೇಲಿರುವ ಜಪಾನೀ ವಿವರಣೆಯ ಪ್ರಕಾರ ಈ ಕಲಾಕೃತಿಗಳನ್ನು ರಚಿಸಿರುವವನು ಜಪಾನಿನ ಕ್ಯೊಟೊ ನಗರದ ಕುರಿಟ ಗ್ರಾಮದ ಗಿನ್ ಕೋಸ್ಯಾನ್ ಜೋ (Ginkousanzou) ಎಂಬ ಕಲಾವಿದ.

ದರ್ಬಾರು ಸಭಾಂಗಣದಿಂದ ಹುಲ್ಲು ಹಾಸು ಹಾಗೂ ಕಾರಂಜಿಗಳು, ದೇವಸ್ಥಾನಗಳ ಗೋಪುರಗಳು, ಭವ್ಯವಾದ ಜಯಮಾರ್ತಾಂಡ ಮಹಾದ್ವಾರ, ದೂರ ದಿಗಂತದಲ್ಲಿರುವ ಪ್ರಖ್ಯಾತ ಲಲಿತಮಹಲ್ ಅರಮನೆ ಹಾಗೂ ಅಂಕುಡೊಂಕಾದ ಚಾಮುಂಡಿ ಬೆಟ್ಟದ ಸಾಲಿನ ನಯನಮನೋಹರ ದೃಶ್ಯ ಗೋಚರಿಸುತ್ತದೆ. ಈ ಅದ್ಭುತ ದೃಶ್ಯ ಕಣ್ಣಿಗೆ ಆನಂದವನ್ನುಂಟು ಮಾಡುತ್ತದೆ. ಚಾವಣಿಯಲ್ಲಿ ವಿಷ್ಣುವಿನ ದಶಾವತಾರಗಳನ್ನು ಬಿಡಿಸಿರುವ ಶಿಲ್ಪಿ ಸಿದ್ಧಲಿಂಗಸ್ವಾಮಿಗಳ ವರ್ಣಚಿತ್ರಗಳತ್ತ ಸಂದರ್ಶಕರು ಆಕರ್ಷಿತರಾಗುವುದು ಖಂಡಿತ. ಮಧ್ಯದ ಪಟ್ಟಿಕೆಯಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮತ್ತು ಮಹೇಶ್ವರರ ಸುತ್ತ ದ್ವಾದಶ ರಾಶಿ ಚಕ್ರಗಳ ವರ್ಣಚಿತ್ರಗಳಿವೆ. ವರ್ಣಚಿತ್ರಪಟ್ಟಿಕೆಗಳ ಮಧ್ಯೆ ತೂಗು ಗೊಂಚಲುದೀಪಗಳಿವೆ.

ಸಂದರ್ಶಕರು ದರ್ಬಾರ್ ಸಭಾಂಗಣದಿಂದ ಒಂದು ಸಾಗುಮಾರ್ಗದ ಮೂಲಕ ಹಾಯ್ದು, ದರ್ಬಾರ್ ಸಭಾಂಗಣದ ನೈಋತ್ಯ ಮೂಲೆಯಲ್ಲಿರುವ ಅಂಬಾ ವಿಲಾಸಕ್ಕೆ ಬರಬಹುದು. ಈ ಮಾರ್ಗದಲ್ಲಿ ಸಾಗುವಾಗ ಎಡಗಡೆ ಆತ್ಮ ವಿಲಾಸ ಗಣೇಶ ಗುಡಿಗೆ ಪ್ರವೇಶ ಕಲ್ಪಿಸುವವ ಸುಂದರವಾದ ದಂತದ ಕೆತ್ತನೆಯಿರುವ ಬಾಗಿಲನ್ನು ಗಮನಿಸದಿರುವುದು ಸಾಧ್ಯವೇ ಇಲ್ಲ.

## ಆತ್ಮ ವಿಲಾಸ ಗಣೇಶ

ಇದು ಗಣೇಶನ ಪುರಾತನ ಗುಡಿಗಳ ಪೈಕಿ ಒಂದಾಗಿದೆ. 1897ರಲ್ಲಿ ಆದ ಅಗ್ನಿ ಅನಾಹುತದಲ್ಲಿ ಮರದ ಅರಮನೆ ನಾಶವಾದರೂ ಈ ಗುಡಿಗೆ

ಯಾವುದೇ ಹಾನಿಯಾಗಲಿಲ್ಲ ಎನ್ನಲಾಗಿದೆ. ಇದನ್ನು ಹೊಸದಾಗಿ ಕಟ್ಟಲಾದ ಅರಮನೆಯಲ್ಲಿ ಸೇರಿಸಲಾಗಿದೆ. ಅಂಬಾವಿಲಾಸ ಮತ್ತು ಪ್ರಧಾನ ದರ್ಬಾರ್ ಸಭಾಂಗಣಕ್ಕೆ ಸಂಪರ್ಕ ಕಲ್ಪಿಸುವ ಮೊಗಸಾಲೆಯಿಂದ, ದಂತದ ಕೆತ್ತನೆ ಕೆಲಸದಿಂದ ಕೂಡಿದ ಸುಂದರವಾದ ಬೀಟೆ ದ್ವಾರದ ಮೂಲಕ ಪ್ರವೇಶಿಸಬಹುದು. ಕಾರು ಮಾರ್ಗದಿಂದ ಸುರುಳಿಮೆಟ್ಟಿಲ ಮೂಲಕ ಪ್ರತ್ಯೇಕವಾದ ಪ್ರವೇಶವೂ ಇಲ್ಲಿಗೆ ಇದೆ.

ಪರಂಪರೆಯ ಪ್ರಕಾರ, ಗಣೇಶನ ವಿಗ್ರಹ ತಿಳಿ ಗಚ್ಚುಗಾರೆಯಿಂದ ಮಾಡಿದುದಾಗಿದೆ ಮತ್ತು 300 ಪವಿತ್ರ ಕ್ಷೇತ್ರಗಳಿಂದ ಸಂಗ್ರಹಿಸಲಾದ 450 ಸಾಲಿಗ್ರಾಮಗಳಿಂದ ರಚಿತವಾಗಿದೆ. ವೈಭವದ ಬೃಹತ್ ಗಣೇಶನಿಗೆ ವರ್ಣಾಲಂಕಾರ ಮಾಡಲಾಗಿದ್ದು ಇಂದಿಗೂ ಇದಕ್ಕೆ ಪೂಜಾದಿಗಳು ಸಲ್ಲುತ್ತಿವೆ.

## ಅಂಬಾವಿಲಾಸ

ವಟಪತ್ರಶಾಯಿ ಕೃಷ್ಣ (ಆಲದೆಲೆಯ ಮೇಲೆ ಮಲಗಿರುವ ಕೃಷ್ಣ) ನನ್ನು ಚಿತ್ರಿಸಿರುವ ದಂತದ ಅಲಂಕಾರಗಳ ಕೆತ್ತನೆಯಿರುವ ಬೀಟೆ ಮರದಿಂದ ಮಾಡಲಾಗಿರುವ ದ್ವಾರದ ಮೂಲಕ ಅಂಬಾ ವಿಲಾಸವನ್ನು ಸಂದರ್ಶಕರು ಪ್ರವೇಶಿಸಬಹುದು. ಬಾಗಿಲುಗಳ ಸಮೇತ ಇಡೀ ದ್ವಾರವನ್ನು 1947ರಲ್ಲಿ ಲಂಡನ್ನಿನ ಆಲ್ಬರ್ಟ್ ಹಾಲಿನಲ್ಲಿ ವ್ಯವಸ್ಥೆಗೊಳಿಸಲಾಗಿದ್ದ ಪ್ರದರ್ಶನಕ್ಕೆ ಕಳುಹಿಸಲಾಗಿದ್ದು ಸೂಕ್ಷ್ಮ ಕೆತ್ತನೆ ಕೆಲಸಕ್ಕಾಗಿ ಅದು ಪ್ರಥಮ ಬಹುಮಾನ ಪಡೆಯಿತು ಎನ್ನಲಾಗಿದೆ. ಈ ಖಾಸಗಿ ದರ್ಬಾರು ಸಭಾಂಗಣ ಅಥವಾ ದಿವಾನ್-ಏ-ಖಾಸ್‌ನ್ನು ಮಹಾರಾಜರು ಖಾಸಗಿ ಸಭೆಗಳಿಗಾಗಿ ಬಳಸುತ್ತಿದ್ದರು. ಈಗ ದಸರಾ ಮಹೋತ್ಸವಗಳ ಸಮಯದಲ್ಲಿ ಈ ಸಭಾಂಗಣದ ಪಶ್ಚಿಮದ ಕೊನೆಯಲ್ಲಿರುವ ಅಷ್ಟಭುಜಾಕೃತಿಯ ಮಂಟಪದಲ್ಲಿ ಚಿನ್ನದ ಸಿಂಹಾಸನವನ್ನು ಇರಿಸಲಾಗುತ್ತದೆ ಮತ್ತು ರಾಜವಂಶದ ಉತ್ತರಾಧಿಕಾರಿ ಖಾಸಗಿ ಪೂಜಾದಿಗಳನ್ನು ನಡೆಸುತ್ತಾರೆ ಮತ್ತು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾರೆ. ವರ್ಣ ಸಂಯೋಜನೆ, ಗೊಂಚಲು ದೀಪಗಳು, ಉಕ್ಕಿನ ಕಂಬಿಚೌಕಟ್ಟುಗಳು, ಚಾವಣಿಯ ಮಧ್ಯಭಾಗದಲ್ಲಿನ ಬಣ್ಣದ ಗಾಜಿನ ಅಲಂಕರಣೆ ಹಾಗೂ ಹಲವು ಪುಷ್ಪಾಲಂಕಾರಗಳನ್ನು ಚಿತ್ರಿಸುವ ಕೆತ್ತನೆಯ ಕೆಲಸವಿರುವ ಮರದ ಚಾವಣಿಗಳಿಂದಾಗಿ ಇಡೀ ಸಭಾಂಗಣದ ವಾತಾವರಣ ಆಹ್ಲಾದಕಾರಿಯಾಗಿ ಪರಿಣಮಿಸಿದೆ. ಕಂಬಿನ ಸ್ತಂಭಗಳ ನಡುವಣ ನೆಲಕ್ಕೆ ಅಮೃತ ಶಿಲೆಯನ್ನು ಹಾಸಲಾಗಿದ್ದು, ಇದರಲ್ಲಿ ಅರ್ಧ ಪ್ರಶಸ್ತ ಶಿಲೆಗಳನ್ನು ಹೊದಿಸಿರುವಂಥ ಹೂವಿನ ಮತ್ತು ಎಲೆ ಗುಂಪಿನ ವಿನ್ಯಾಸಗಳಿವೆ. ಕಿಟಕಿಗಳಿಗೆ ಕೆತ್ತನೆ, ಗಾಜಿನ





ಅಲಂಕರಣಗಳಿವೆ ಮತ್ತು ಕಿಟಕಿಗಳ ಮಧ್ಯದಲ್ಲಿ ಖ್ಯಾತ ಕಲಾವಿದ ಕೆ. ವೆಂಕಟಪ್ಪನವರ ಪ್ಲ್ಯಾಸ್ಟರ್ ಆಫ್ ಪ್ಯಾರಿಸ್‌ನ ಕಲಾಕೃತಿಗಳಿವೆ. ರಾಮನಿಂದ ಹನುಮಂತನು ಮುದ್ರೆಯುಂಗುರ ಸ್ವೀಕರಿಸುತ್ತಿರುವುದು, ಬುದ್ಧ ತನ್ನ ಮಡದಿ ಪುತ್ರರಿಂದ ಭಿಕ್ಷೆಯನ್ನು ಸ್ವೀಕರಿಸುತ್ತಿರುವುದು, ಶಕುಂತಲೆ ಋಷ್ಯಾಶ್ರಮವನ್ನು ಬಿಡುತ್ತಿರುವುದು ಇವುಗಳಲ್ಲಿ ಸೇರಿವೆ.

ಈಗ ದರ್ಬಾರ್ ಹಾಲಿನಿಂದ ಕೈಸಾಲೆಯೊಂದರ ಮೂಲಕ ಹಾಯ್ದು ಅಂಬಾ ವಿಲಾಸವನ್ನು ಸಂದರ್ಶಕರು ಪ್ರವೇಶಿಸುತ್ತಾರೆ. ಆದರೆ, ಈ ಖಾಸಗಿ ಸಭಾಂಗಣಕ್ಕೆ ಮುಖ್ಯ ಪ್ರವೇಶ ದ್ವಾರ ಪೂರ್ವದಿಕ್ಕಿನಲ್ಲಿತ್ತು. ಮಹಾರಾಜರ ಕಾಲದಿಂದಲೂ ಸಂದರ್ಶಕರು ಚಚ್ಚೌಕವಾಗಿರುವ ಕೊಠಡಿಗೆ ಪ್ರವೇಶ ಕಲ್ಪಿಸುವ ಸುರುಳಿ ಮಹಡಿ ಮೆಟ್ಟಿಲುಗಳ ಮೂಲಕ, ನೆಲ ಅಂತಸ್ತಿನ ಪ್ರವೇಶದ್ವಾರವನ್ನು ಹಾಯ್ದು ಅಂಬಾ ವಿಲಾಸಕ್ಕೆ ಬರುತ್ತಿದ್ದರು. ಈ ಕೊಠಡಿಯಲ್ಲಿ ನಾಲ್ಕು ಕಂಚಿನ ಕಂಬಗಳಿವೆ. ಮೇಲ್ಭಾಗದಲ್ಲಿ ಬಣ್ಣದ ಗಾಜಿನ ಚಾವಣಿಯಿದೆ. ಹಳೆಯ ಮರದ ಅರಮನೆಗೆ ಸೇರಿದ್ದ ಐದು ಮರದ ಬಾಗಿಲುಗಳು ಈ ಕೊಠಡಿಯಲ್ಲಿವೆ. ಇವುಗಳ ಪೈಕಿ ಎರಡು ಉತ್ತರದ ಗೋಡೆಯಲ್ಲೂ ಮೂರು ಪೂರ್ವದ ಗೋಡೆಯಲ್ಲೂ ಇವೆ. ಪೂರ್ವದ ಗೋಡೆಯಲ್ಲಿರುವ ಬಾಗಿಲುಗಳ ಪೈಕಿ ಎರಡು ಬೆಳ್ಳಿಯದಾಗಿದ್ದು ಅನುರಕ್ತ ಜೋಡಿಗಳನ್ನು ಚಿತ್ರಿಸುತ್ತಿವೆ. ಈ ಪ್ರತಿಮೆಗಳು ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನಗಳಿಗೆ ವಿಶಿಷ್ಟವಾದ ವಸ್ತ್ರ ವಿನ್ಯಾಸಗಳಿಂದ ಕೂಡಿವೆ. ಬೆಳ್ಳಿಯ ಬಾಗಿಲುಗಳ ಪಾರ್ಶ್ವದಲ್ಲಿ ದಂತದ ಜೋಡಣೆಗಳಿರುವ ಮರದ ಬಾಗಿಲು ಇದೆ. ಈ ಎಲ್ಲ ಬಾಗಿಲುಗಳನ್ನು ಗೋಡೆಯಲ್ಲಿ ನೆಲೆಗೊಳಿಸಲಾಗಿದ್ದು, ಇದರಿಂದ ಹಳೆಯ ಅರಮನೆಯ ಬಾಗಿಲುಗಳ ಮಾದರಿಗಳನ್ನು ಈಗಲೂ ಸಂದರ್ಶಕರು ವೀಕ್ಷಿಸಬಹುದಾಗಿದೆ.

ಮರದ ಮೆಟ್ಟಿಲು ಸಾಲಿನ ಮೂಲಕ ಹಾಯ್ದು ಪೂರ್ವ ದಿಕ್ಕಿನಲ್ಲಿ ಕದವಿಟ್ಟಿರುವ ಮೂರು ದ್ವಾರಗಳ ಮೂಲಕ ಅಂಬಾ ವಿಲಾಸವನ್ನು ಪ್ರವೇಶಿಸಬಹುದು. ಇವುಗಳ ಪೈಕಿ ಮಧ್ಯಭಾಗದಲ್ಲಿರುವ ಬಾಗಿಲು (ದ್ವಾರ) ಬೆಳ್ಳಿಯದಾಗಿದೆ. ಇಡೀ ದ್ವಾರದ ಚೌಕಟ್ಟು ಮತ್ತು ದ್ವಾರಗಳ ಮಧ್ಯಭಾಗ ಮರದ್ದಾಗಿದ್ದು, ಉಬ್ಬು ಚಿತ್ರ ಕ್ರಮದಲ್ಲಿ ಬೆಳ್ಳಿ ಫಲಕದ ಮೇಲೆ ವಿಷ್ಣುವಿನ ದಶಾವತಾರಗಳನ್ನು ಮತ್ತು ಅಷ್ಟ ದಿಕ್ಪಾಲಕರನ್ನು ಚಿತ್ರಿಸಲಾಗಿದೆ. ಬೆಳ್ಳಿಯ ಬಾಗಿಲ ಹಿಂಬದಿಯಲ್ಲಿ ವಿವಿಧ ಭಂಗಿಗಳಲ್ಲಿ ಬಾಲಕೃಷ್ಣನ ಪ್ರತಿಮೆಗಳಿದ್ದು, ಇವು ಕೂಡ ಉಬ್ಬು ಚಿತ್ರಗಳಾಗಿವೆ. ಬಾಗಿಲುವಾಡದ ಮೇಲೆ ಒಳಭಾಗದಲ್ಲಿ ಬ್ರಹ್ಮ, ವಿಷ್ಣು, ಮತ್ತು ಮಹೇಶ್ವರರ ಚಿತ್ರಗಳೂ, ಹೊರಭಾಗದಲ್ಲಿ ಮಹಿಷಮರ್ದಿನಿಯಾದ ದುರ್ಗೆಯ ರೂಪದಲ್ಲಿನ ಚಾಮುಂಡೇಶ್ವರಿ ದೇವಿಯ

ಚಿತ್ರವನ್ನೂ, ಇದರ ಇಕ್ಕೆಲಗಳಲ್ಲಿ ಲಕ್ಷ್ಮಿ ಮತ್ತು ಸರಸ್ವತಿಯರ ಚಿತ್ರಗಳನ್ನು ಉಬ್ಬು ಶಿಲ್ಪಗಳ ರೂಪದಲ್ಲಿ ಕೆತ್ತಲಾಗಿದೆ.

## ಅರಮನೆ ಕೋಟೆಯಲ್ಲಿರುವ ದೇವಸ್ಥಾನಗಳು

ಮೈಸೂರು ಅರಮನೆ ಕೋಟೆಯಲ್ಲಿ ಮತ್ತು ಅದರ ಸುತ್ತಮುತ್ತ ಗಮನಾರ್ಹವಾದ ಕೆಲವು ದೇವಸ್ಥಾನಗಳು ಇವೆ.

## ಕೋಡಿ ಭೈರವೇಶ್ವರ ಸ್ವಾಮಿ ದೇವಸ್ಥಾನ

ಭೈರವನ ರೂಪದಲ್ಲಿ ಶಿವನಿಗೆ ಅರ್ಪಿತವಾದ ಈ ದೇವಸ್ಥಾನವು ಹಿಂದಿನ ತನ್ನ ನೆಲೆಯಿಂದಾಗಿ ಈ ಹೆಸರನ್ನು ಪಡೆದುಕೊಂಡಿದೆ. ಸುಮಾರಾಗಿ ಚಿಕ್ಕದಾಗಿರುವ ಈ ದೇವಸ್ಥಾನ ದೇವರಾಯ ಸಾಗರ ಅಥವಾ ದೊಡ್ಡಕೆರೆಯ ಕೋಡಿಯ ಮೇಲುಭಾಗದಲ್ಲಿತ್ತು. ಇಂದು ಇದು ಅರಮನೆ ಕೋಟೆಯ ಹೊರವಲಯದಲ್ಲಿ ಇದೆ ಮತ್ತು ದೇವರಾಯ ಸಾಗರವು ದಸರಾ ವಸ್ತುಪ್ರದರ್ಶನದ ಸಂಕೀರ್ಣವಾಗಿದೆ. ಈ ದೇವಸ್ಥಾನ ಮೈಸೂರಿನ ಇತಿಹಾಸದ ದೃಷ್ಟಿಯಿಂದ ತುಂಬ ಪ್ರಾಮುಖ್ಯವಾದದು. ಮೈಸೂರು ರಾಜ್ಯದ ಸಂಸ್ಥಾಪಕರಾದ ಯದುರಾಯ ಮತ್ತು ಕೃಷ್ಣರಾಯರು ರಾಜಪುರೋಹಿತರನ್ನು ಸಂಧಿಸಿದ್ದು ಇದೇ ಸ್ಥಳದಲ್ಲಿ. ಇದರಿಂದಾಗಿಯೇ ಮೈಸೂರು ರಾಜ್ಯ ಸ್ಥಾಪನೆಗೊಂಡಿದ್ದು. ಆ ಚಿಕ್ಕಗುಡಿಯಲ್ಲಿ ಭೈರವನ ವಿಗ್ರಹವಿದೆ. ಇದು ಒಂದು ಮೀಟರಿಗಿಂತಲೂ ಕಡಿಮೆ ಎತ್ತರವಾಗಿದೆ. ವಿಗ್ರಹದ ನಾಲ್ಕೂ ಹಸ್ತಗಳಲ್ಲಿ ತ್ರಿಶೂಲ, ಡಮರು, ಕಪಾಲ, ಮತ್ತು ಖಡ್ಗ (ಕತ್ತಿ)ಗಳಿವೆ. ಭೈರವನ ಎಡ ಭಾಗದಲ್ಲಿ ಭದ್ರಕಾಳಿಯ ವಿಗ್ರಹವಿದ್ದು, ಮೇಲಕ್ಕೆ ಎತ್ತಿದ ಬಲಗೈ ಕುಡುಗೋಲನ್ನು ಹಿಡಿದಿದೆ. ಭೈರವನ ಬಲಪಾರ್ಶ್ವದಲ್ಲಿ ಚೌರೀಧಾರಕ ಇದ್ದಾನೆ.

ಈ ಶತಮಾನದ ಪ್ರಥಮ ಪಾದದಲ್ಲಿ ಅರಮನೆಯ ಕೋಟೆಯಲ್ಲಿದ್ದ ಇಕ್ಕಟ್ಟಾದ ಕಟ್ಟಡಗಳನ್ನು ತೆಗೆದುಹಾಕುತ್ತಿದ್ದಾಗ, ಐತಿಹಾಸಿಕವಾಗಿ ಪ್ರಾಮುಖ್ಯವಾದ ಈ ಪ್ರಾಚೀನ ದೇವಸ್ಥಾನವನ್ನು ಕೆಡವಿಹಾಕುವ ಪ್ರಯತ್ನ ನಡೆಯಿತು. ಮೈಸೂರು ರಾಜವಂಶದೊಡನೆ ಏರ್ಪಟ್ಟಿದ್ದ ಅದರ ಸಂಬಂಧವನ್ನು ಪರಿಗಣಿಸಿ ನಾಲ್ವಡಿ ಕೃಷ್ಣರಾಜ ಒಡೆಯರವರು ಆ ಪ್ರಯತ್ನವನ್ನು ತಡೆಗಟ್ಟಿದರು.

## ಶ್ರೀ ಲಕ್ಷ್ಮೀರಮಣ ಸ್ವಾಮಿ ದೇವಸ್ಥಾನ

ಈ ದೇವಸ್ಥಾನ ಮೈಸೂರು ನಗರದ ಪ್ರಾಚೀನ ದೇವಸ್ಥಾನಗಳ ಪೈಕಿ ಒಂದಾಗಿದೆ. ಇದು ಅರಮನೆಯ ಒಳಗಡೆ, ಕೋಟೆಯ ಪಶ್ಚಿಮ ಭಾಗದಲ್ಲಿ





ಇದೆ. ಕೃಷ್ಣದೇವರಾಯನ ತಂದೆ ವಿಜಯನಗರದ ರಾಜ ನರಸನಾಯಕನ ಆಜ್ಞೆಯ ಮೇರೆಗೆ ಕ್ರಿ.ಶ. 1499ರಲ್ಲಿ ಲಕ್ಷ್ಮೀರಮಣಸ್ವಾಮಿಗೆ ಮಾಡಿದ ದಾನವನ್ನು ಕೋಲ್ಸ್ ಗಾರ್ಡನ್ (ಇಂದಿನ ಬನ್ನಿಮಂಟಪ) ನಲ್ಲಿ ಕಂಡು ಬಂದ ಶಾಸನ ದಾಖಲಿಸಿದೆ. “ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ” ಯ ಪ್ರಕಾರ 1599ರಲ್ಲಿ ರಾಜ ಒಡೆಯರ ಪ್ರಾರ್ಥನೆಯ ಮೇರೆಗೆ ದೈವಕೃಪೆಯಿಂದ, ಅರೆ ಕುರುಡ ಬ್ರಾಹ್ಮಣನೊಬ್ಬನ ಅಂಧತ್ವ ನಿವಾರಣೆಯಾಯಿತು. ಆ ಕಾರ್ಯದ ಜ್ಞಾಪಕಾರ್ಥವಾಗಿ ದೇವರಿಗೆ ಎದುರಾಗಿ ಅಂಜಲೀ ಮುದ್ರೆಯಲ್ಲಿ ನಿಂತಿರುವ ರಾಜನ ವಿಗ್ರಹವನ್ನು ಸ್ಥಾಪಿಸಲಾಗಿದೆ.

ಅನಾಲ್ಸ್‌ನಲ್ಲಿ ಮತ್ತೊಂದು ಪವಾಡ ಸಹ ದಾಖಲಾಗಿದೆ. ರಾಜ ಒಡೆಯರು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ತನ್ನ ಪ್ರಾಂತ್ಯದ ಮೂಲಕ ಹೋಗುವುದನ್ನು ತಡೆಗಟ್ಟುವುದರಲ್ಲಿ ಕಾರುಗಳ್ಳಿಯ ದಳವಾಯಿ ವೀರರಾಜಯ್ಯ ವಿಫಲನಾದ.

ಆ ಪರಾಭವದ ಸೇಡು ತೀರಿಸಿಕೊಳ್ಳುವ ಸಲುವಾಗಿ ವೀರರಾಜಯ್ಯನು ರಾಜ ಒಡೆಯರಿಗೆ ವಿಷವೊಡ್ಡುವಂತೆ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದ ಅರ್ಚಕ ಶ್ರೀನಿವಾಸಯ್ಯನಿಗೆ ಆಮಿಷವೊಡ್ಡಿದ. ರಾಜ ಒಡೆಯರು ಪ್ರತಿನಿತ್ಯ ಈ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಿದ್ದರು. ಒಂದು ಮುಂಜಾನೆ ಅರ್ಚಕನು ತೀರ್ಥಕ್ಕೆ ವಿಷವನ್ನು ಬೆರೆಸಿದ್ದ. ಆತ ರಾಜ ಒಡೆಯರಿಗೆ ತೀರ್ಥ ನೀಡುತ್ತಿದ್ದಾಗ ಆತನ ಕೈಗಳು ನಡುಗಲಾರಂಭಿಸಿದವು. ಅರ್ಚಕನನ್ನು ಪ್ರಶ್ನಿಸಿದಾಗ ತೀರ್ಥವು ವಿಷಮಿಶ್ರಿತವಾಗಿದೆಯೆಂಬ ಅಂಶವನ್ನು ಅವನು ಒಪ್ಪಿಕೊಂಡುಬಿಟ್ಟ. ರಾಜ ಒಡೆಯರು ಆ ತೀರ್ಥವನ್ನೇ ಸೇವಿಸಿದರು. ಅನಾಲ್ಸ್ ಪ್ರಕಾರ ಅವರ ಕಂಠದಲ್ಲಿ ವಿಷವು ಅಮೃತವಾಗಿ ಪರಿವರ್ತನೆಗೊಂಡಿತು. ಅರ್ಚಕನನ್ನು ಕನ್ನಂಬಾಡಿಯ ದೇವಸ್ಥಾನವೊಂದಕ್ಕೆ ವರ್ಗಾವಣೆ ಮಾಡುವುದರ ಮೂಲಕ ದಂಡಿಸಲಾಯಿತು. ಕಾರುಗಳ್ಳಿ ದಳವಾಯಿಯ ಮೂಗು, ಕಿವಿಗಳನ್ನು ಕತ್ತರಿಸಿಹಾಕಲಾಯಿತು. ಆತನ ಕೋಟೆಯನ್ನು ನಾಶಪಡಿಸಿ ಅವನ ಖಜಾನೆಯ ಆದಾಯವನ್ನು ರಾಜವಂಶದ ಕುಲದೇವತೆಯಾದ ಚಾಮುಂಡೇಶ್ವರಿಗೆ ಸಮರ್ಪಿಸಲಾಯಿತು. ತಮ್ಮ ಪ್ರಾಣರಕ್ಷಣೆ ಮಾಡಿದುದಕ್ಕಾಗಿ ರಾಜ ಒಡೆಯರು ಲಕ್ಷ್ಮೀರಮಣನಿಗೆ ಕಾಣಿಕೆಯಾಗಿ ದೇವಸ್ಥಾನಕ್ಕೆ ಬಂಗಾರದ ಕಲಶದಿಂದ ಕೂಡಿದ ಎತ್ತರವಾದ ಗೋಪುರವನ್ನೊಳಗೊಂಡ ಮಹಾದ್ವಾರವನ್ನು ನಿರ್ಮಾಣ ಮಾಡಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರವರು ಮಹಾದ್ವಾರ ಮತ್ತು ಗೋಪುರವನ್ನು ಜೀರ್ಣೋದ್ಧಾರ ಮಾಡಿಸಿದುದನ್ನು ದೇವಸ್ಥಾನದಲ್ಲಿರುವ 1851ರ ನವೆಂಬರ್ 30ರ ಒಂದು ಶಾಸನ ದಾಖಲಿಸಿದೆ.

ದೇವಸ್ಥಾನದ ಹಿಂಬದಿಯಲ್ಲಿರುವ ಸುಂದರವಾದ ಮಂಟಪವನ್ನು ಕಂಠೀರವ ನರಸರಾಜ ಒಡೆಯರು (ಕ್ರಿ.ಶ. 1638–1659) ನಿರ್ಮಿಸಿದರು. ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ ಪಟ್ಟಾಭಿಷೇಕಕ್ಕೆ ಸಂಬಂಧಿಸಿದ ಸಕಲ ಧಾರ್ಮಿಕ ಕಾರ್ಯಕಲಾಪಗಳು 1799ರ ಜೂನ್ 30 ರಂದು ಈ ದೇವಸ್ಥಾನದಲ್ಲೇ ನಡೆದುದರಿಂದಲೂ ಈ ದೇವಸ್ಥಾನ ಮುಖ್ಯವಾಗಿದೆ.

## ಶ್ರೀ ಶ್ವೇತ ವರಾಹಸ್ವಾಮಿ ದೇವಸ್ಥಾನ

ಶ್ರೀ ಶ್ವೇತವರಾಹಸ್ವಾಮಿ ದೇವಸ್ಥಾನ ಕೋಟೆಯ ದಕ್ಷಿಣ ಮಹಾದ್ವಾರದ ಬಳಿ ಇದೆ. ಅದು ಹೊಯ್ಸಳ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ದೇವಸ್ಥಾನದ ಉತ್ಸವ ಮೂರ್ತಿಯು ಚಿಕ್ಕ ದೇವರಾಜ ಒಡೆಯರ (1673–1704) ಕೊಡುಗೆ ಎಂಬುದಾಗಿ, ಅದರ ಅಡಿಯಲ್ಲಿರುವ ಶಾಸನದಲ್ಲಿ ದಾಖಲಿಸಿದೆ. ಈಗ ಗರ್ಭಗೃಹದಲ್ಲಿರುವ ಶ್ವೇತ ವರಾಹಸ್ವಾಮಿಯ ಶಿಲಾ ಪ್ರತಿಮೆಯನ್ನು ಚಿಕ್ಕದೇವರಾಜ ಒಡೆಯರು ಶ್ರೀ ಮುಷ್ಣದಿಂದ ತಂದರು ಮತ್ತು ಆಗಿನ ರಾಜಧಾನಿಯಾಗಿದ್ದ ಶ್ರೀ ರಂಗಪಟ್ಟಣದ ಹೊಸ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಿದರು. ಆ ದೇವಸ್ಥಾನವನ್ನು ಟೀಪೂ ಸುಲ್ತಾನ್ ನಾಶಮಾಡಿದನು. ಅನಂತರ 1809ರಲ್ಲಿ ಆ ಮೂರ್ತಿಯನ್ನು ಮೈಸೂರಿಗೆ ತರಲಾಯಿತು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ ಇಚ್ಛೆಯ ಮೇರೆಗೆ ದಿವಾನ್ ಪೂರ್ಣಯ್ಯನವರು ಕಟ್ಟಿಸಿದ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಯಿತು.

ದೇವಸ್ಥಾನದಲ್ಲಿ ಸುಂದರವಾದ ಕೆತ್ತನೆ ಮಾಡಿದ ಮಹಾದ್ವಾರ, ಮೋಹಕವಾದ ಸ್ತಂಭಗಳು ಮತ್ತು ಉತ್ತಮ ಗೋಪುರ ಇವೆ. ಅಲ್ಲಿ ಶ್ರೀ ವೈಷ್ಣವ ಸಂತರಾದ ದೇಶಿಕರ್ ಮತ್ತು ಜೀಯರ್ ಅವರುಗಳ ಪ್ರತಿಮೆಗಳಿವೆ. ಆ ದೇವಸ್ಥಾನದ ಮುಖ್ಯ ಲಕ್ಷಣಗಳ ಪೈಕಿ ಒಂದು ಎಂದರೆ ನವರಂಗ ಮತ್ತು ಗೋಡೆಗಳ ಮೇಲೆ ರಚಿಸಿದ ಭಿತ್ತಿ ಚಿತ್ರಗಳು. ಈ ಭಿತ್ತಿ ಚಿತ್ರಗಳಲ್ಲಿ ರಾಮಾಯಣ ಮತ್ತು ಭಾಗವತದ ದೃಶ್ಯಗಳನ್ನು ಅದರಲ್ಲಿಯೂ ವಿಶೇಷವಾಗಿ ಕೃಷ್ಣನ ಸಾಹಸಗಳನ್ನು ಚಿತ್ರಿಸಲಾಗಿದೆ. ಇವನ್ನು ಉತ್ತಮವಾಗಿ ಕಾಪಾಡಿಕೊಂಡು ಬರಲಾಗಿದೆ. ದೇವಸ್ಥಾನವು ಎತ್ತರವಾದ ಗೋಡೆಯ ಆವರಣದೊಳಗಿದೆ. ಆಗ್ನೇಯ ಪಾರ್ಶ್ವದ ಭಿತ್ತಿಯ ಮೇಲೆ, ರಾಮ ಪಟ್ಟಾಭಿಷೇಕವನ್ನು ಚಿತ್ರಿಸುವ ಭಿತ್ತಿ ಚಿತ್ರವೂ ಇದೆ. ಈ ಪಟ್ಟಿಕೆಯ ತಳಭಾಗದಲ್ಲಿ ಬರೆದಿರುವ ಶಾಸನದಿಂದ ಈ ವರ್ಣ ಚಿತ್ರವನ್ನು ಶಕ ಸಂವತ್ಸರ ಭಾವ ಮಾಘ ಶುದ್ಧ ದ್ವಿತೀಯದಂದು (ಕ್ರಿ.ಶ. 1875) ಪೂರೈಸಲಾಯಿತು ಎಂದು ತಿಳಿದು ಬರುತ್ತದೆ.





## ಶ್ರೀ ತ್ರಿನಯನೇಶ್ವರಸ್ವಾಮಿ ದೇವಸ್ಥಾನ

ಇದು ಒಂದು ಪ್ರಾಚೀನ ದೇವಸ್ಥಾನ. ಇದು ಮೂಲ ಮೈಸೂರು ಕೋಟೆಯ ಹೊರಭಾಗದಲ್ಲಿ ದೇವರಾಯಸಾಗರದ ದೊಡ್ಡಕೆರೆ) ದಡದಲ್ಲಿ ರಾಜ ಒಡೆಯರ ಕಾಲ್ಕಕಿಂತಲೂ ಮೊದಲೇ ಇದ್ದಿತು. ಕಂಠೀರವ ನರಸರಾಜ ಒಡೆಯರು ಮತ್ತು ಅವರ ಉತ್ತರಾಧಿಕಾರಿ ದೊಡ್ಡ ದೇವರಾಜ ಒಡೆಯರ ಕಾಲದಲ್ಲಿ ಕೋಟೆಯನ್ನು ವಿಸ್ತರಿಸಲಾಯಿತು. ತ್ರಿನಯನೇಶ್ವರ ದೇವಸ್ಥಾನ ಕೋಟೆ ಒಳಗೆ ಸೇರಿತು. ದೇವಸ್ಥಾನವನ್ನು ವಿಸ್ತರಿಸಲಾಯಿತು ಮತ್ತು ನವೀಕರಿಸಲಾಯಿತು. ಕಂಠೀರವ ನರಸರಾಜ ಒಡೆಯರು ಒಂದು ಕೈಸಾಲೆಯನ್ನು ನಿರ್ಮಿಸಿದರು ಮತ್ತು ಪಂಚಲಿಂಗಗಳನ್ನು ಹಾಗೂ ದಕ್ಷಿಣಮೂರ್ತಿ, ಕ್ಷೇತ್ರಪಾಲ, ಕುಮಾರ ಮತ್ತು ಸೂರ್ಯ ಸೇರಿದಂತೆ ಹಲವು ದೇವತೆಗಳನ್ನು ಪ್ರತಿಷ್ಠಾಪಿಸಿದರು. ಅಂಜಲೀಮುದ್ರೆಯ ತಮ್ಮ ಶಿಲಾಪ್ರತಿಮೆಯನ್ನು ಅಲ್ಲಿ ಸ್ಥಾಪಿಸಿದರು. ಅದೇ ಭಂಗಿಯಲ್ಲಿನ ದೊಡ್ಡ ದೇವರಾಜ ಒಡೆಯರ ಪ್ರತಿಮೆಯೂ ಅದರ ಪಕ್ಕದಲ್ಲಿ ಇದೆ. ಪಶ್ಚಿಮಾಭಿಮುಖವಾಗಿರುವ ಶಿವ ದೇವಾಲಯಗಳನ್ನು ಪವಿತ್ರ ಸಾನಿಧ್ಯವೆನ್ನಲಾಗುತ್ತದೆ. ತ್ರಿನಯನೇಶ್ವರ ಎಂಬ ಜನಪ್ರಿಯ ಹೆಸರನ್ನು ಸ್ಥಳಪುರಾಣ ಹೀಗೆ ವಿವರಿಸುತ್ತದೆ. ತೃಣಬಿಂದು ಋಷಿಯು ಈ ಸ್ಥಳದಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಿದ. ಸಂತೃಪ್ತನಾದ ಶಿವನು ಪ್ರತ್ಯಕ್ಷನಾದ. ತೃಣಬಿಂದು ಮುನಿ ಇಲ್ಲಿ ಲಿಂಗವನ್ನು ಪ್ರತಿಷ್ಠಪಿಸಿದ. ಹೀಗಾಗಿ ಇಲ್ಲಿನ ಲಿಂಗ ತೃಣೇಶ್ವರ ಎಂದೂ ಕರೆಯಲಾಗಿದೆ. ಶಿವನಿಗೆ ಮೂರು ಕಣ್ಣುಗಳು ಇರುವುದರಿಂದ ದೇವರನ್ನು ತ್ರಿನಯನೇಶ್ವರ ಎಂದು ಕರೆಯಲಾಗುತ್ತಿದೆ. ಅರ್ಧಮೀಟರಿಗೂ ಕಡಿಮೆ ಎತ್ತರದ ತೃಣಬಿಂದು ವಿಗ್ರಹ ಕೂಡ ದೇವಾಲಯ ಸಂಕೀರ್ಣದಲ್ಲಿ ಕಂಡುಬರುತ್ತದೆ.

ದೇವಸ್ಥಾನಕ್ಕೆ ಮಹಾದ್ವಾರ ಸಮೇತ ಸುತ್ತುಗೋಡೆ ಇದೆ. ಮೂಲತಃ ಇದರ ಮೇಲ್ಭಾಗದಲ್ಲಿ ಗೋಪುರವಿತ್ತೆಂದು ಹೇಳಲಾಗಿದೆ. ಈ ಗೋಪುರ ಕ್ರಿ.ಶ. 18ನೇ ಶತಮಾನದ ಕೊನೆಯ ವೇಳೆಗೆ ನಾಶಗೊಂಡಿತೆಂದು ಹೇಳಲಾಗಿದೆ.

## ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನ

ತಾವು ಮಹಾಭಾರತದ ಶ್ರೀ ಕೃಷ್ಣನಿಂದ ಸ್ಥಾಪಿತವಾದ ಯದುವಂಶದವರೆಂದು ಮೈಸೂರು ರಾಜವಂಶೀಯರು ಹೇಳಿಕೊಳ್ಳುತ್ತಾರೆ. ಹಾಗಾಗಿ, ಕೃಷ್ಣನಿಗೆಂದು ಯಾವುದೇ ದೇವಸ್ಥಾನವಿರದ ಲೋಪ ತುಂಬುವ

ಸಲುವಾಗಿ, ಅವರು ಶ್ರೀ ಪ್ರಸನ್ನ ಕೃಷ್ಣದೇವಸ್ಥಾನ ನಿರ್ಮಾಣ ಕಾರ್ಯ 1825ರಲ್ಲಿ ಪ್ರಾರಂಭಿಸಿದರು. ಶಾಸನದ ಪ್ರಕಾರ 1829ರಲ್ಲಿ ಅದು ಪೂರ್ಣಗೊಂಡಿತು.

ಗರ್ಭಗೃಹದಲ್ಲಿ ಕ್ಲೋರೈಟ್ ಸಿಸ್ಟ್‌ನಲ್ಲಿ ಮಾಡಲಾದ ಅಂಬೆಗಾಲು ಕೃಷ್ಣನ ಸುಂದರವಾದ ವಿಗ್ರಹವಿದೆ. ಒಂದು ಕೈಯಲ್ಲಿ ಬೆಣ್ಣೆಯ ಮುದ್ದೆ ಇದೆ. ಶಿಶುವಿನ ಮುಗ್ಧಭಾವ ಆ ಮೂರ್ತಿಯಲ್ಲಿ ಚೆನ್ನಾಗಿ ವ್ಯಕ್ತಗೊಂಡಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಈ ಸತ್ಕಾರ್ಯದ ನೆನಪಿಗಾಗಿ ಈ ದೇವಸ್ಥಾನದಲ್ಲಿ ಇಂದಿಗೂ ಪತ್ನೀಸಮೇತರಾದ ಅವರ ವಿಗ್ರಹಕ್ಕೆ ಪೂಜಾದಿಗಳನ್ನು ನಡೆಸಲಾಗುತ್ತಿದೆ. ಮುಮ್ಮಡಿ ಕೃಷ್ಣ ರಾಜ ಒಡೆಯರ್ ಅವರೇ ಈ ದೇವಸ್ಥಾನಕ್ಕೆ ದಾನಗಳನ್ನು ನೀಡಿದ್ದಾರೆ. ಪ್ರತಿಯೊಂದರಲ್ಲೂ ಹೆಸರು ನಮೂದಿಸಿದ್ದಾರೆ. ದೇವದೇವತೆಗಳ ಸಾಧು ಸಂತರ ಹಿತ್ತಾಳೆ ವಿಗ್ರಹಗಳನ್ನು ನೀಡಿದ್ದಾರೆ. ದೇವಸ್ಥಾನದ ಹೊರಭಾಗದಲ್ಲಿ' ಅತ್ರಿಮುನಿಯ ಶಿಲ್ಪವಿದೆ. ಪರಂಪರೆಯ ಪ್ರಕಾರ, ಕೃಷ್ಣರಾಜ ಒಡೆಯರು ಆತ್ರೇಯ ಗೋತ್ರಕ್ಕೆ ಸೇರಿದವರಾಗಿದ್ದುದರಿಂದ ದೇವಸ್ಥಾನದ ಪ್ರಥಮ ಪುರೋಹಿತ ಕೂಡ ಈ ಗೋತ್ರಕ್ಕೆ ಸೇರಿದ್ದುದರಿಂದ ಅತ್ರಿಯ ಪ್ರತಿಮೆಯನ್ನು ಇಲ್ಲಿ ಸ್ಥಾಪಿಸಲಾಗಿದೆ.

ವರಾಹಸ್ವಾಮಿ ದೇವಸ್ಥಾನದಂತೆಯೇ ಈ ದೇವಸ್ಥಾನವೂ ಅದರ ಮಧ್ಯ ನವರಂಗದ ಭಿತ್ತಿ ಚಿತ್ರಗಳಿಗೆ ಪ್ರಸಿದ್ಧವಾಗಿದೆ. ಈ ಭಿತ್ತಿ ಚಿತ್ರಗಳು ಭಾಗವತ ಪ್ರಸಂಗಗಳನ್ನು ಚಿತ್ರಿಸಿವೆ. ಈ ದೇವಸ್ಥಾನದ ಮತ್ತು ವರಾಹ ಸ್ವಾಮಿಯ ದೇವಸ್ಥಾನದ ಭಿತ್ತಿ ಚಿತ್ರಗಳು 19ನೇ ಶತಮಾನದ ಮೈಸೂರು ವರ್ಣಚಿತ್ರಗಳಿಗೆ ಉತ್ಕೃಷ್ಟತಮ ಮಾದರಿಗಳಾಗಿವೆ.

## ಖಿಲ್ಲೆ ವೆಂಕಟರಮಣಸ್ವಾಮಿ ದೇವಸ್ಥಾನ

ಟೀಪೂವಿನ ಆಳ್ವಿಕೆಯ ಅವಧಿಯಲ್ಲಿ ಮೈಸೂರು ರಾಜಮನೆತನ ಶ್ರೀರಂಗಪಟ್ಟಣದಲ್ಲಿಯೇ ಇದ್ದಿತು. ಇಮ್ಮಡಿ ಕೃಷ್ಣರಾಜ ಒಡೆಯರ ಮಡದಿ ರಾಣಿ ಲಕ್ಷ್ಮಮ್ಮಣಿಯವರಿಗೆ ರಾಜಮನೆತನದ ಬಗ್ಗೆ ಹಾಗೂ ಅದರ ಭವಿಷ್ಯದ ಬಗ್ಗೆ ತೀವ್ರವಾದ ಆತಂಕವಿತ್ತು. ಆಸಮಯದಲ್ಲಿ ವೆಂಕಟರಮಣಸ್ವಾಮಿ ಅವರ ಕನಸಿನಲ್ಲಿ ಬಂದು, ಬಲಮುರಿಯಲ್ಲಿರುವ ತನ್ನ ವಿಗ್ರಹವನ್ನು ತಂದು ಮೈಸೂರಿನಲ್ಲಿ ಪ್ರತಿಷ್ಠಾಪಿಸಬೇಕೆಂದೂ ಈ ಪುಣ್ಯಕಾರ್ಯದಿಂದ ಆಕೆಯ ವಂಶಕ್ಕೆ ದುರಿತಗಳಿಂದ ಮುಕ್ತಿ ದೊರೆಯುವುದೆಂದೂ ತಿಳಿಸಿದ. ಹಾಗಾಗಿ ಆಕೆ ಸುಲ್ತಾನನ ಅರಿವಿಗೆ ಬಾರದಂತೆ ಬಲಮುರಿಗೆ ತೆರಳಿದರು, ಹಾಗೂ





ವೆಂಕಟರಮಣಸ್ವಾಮಿಯ ವಿಗ್ರಹವನ್ನು ಮೈಸೂರಿಗೆ ತಂದರು. ದೇವಸ್ಥಾನದಲ್ಲಿ ಅದನ್ನು ಪ್ರತಿಷ್ಠಾಪಿಸಿ, ನಿರಂತರವಾಗಿ ಪೂಜಾದಿಗಳನ್ನು ಸಲ್ಲಿಸಿದರು. ಇದರಿಂದ ರಾಜಮನೆತನಕ್ಕೆ ಸಹಾಯ ವಾಯಿತೆನ್ನಲಾಗಿದೆ. ಟೀಪೂವಿನ ಪತನಾನಂತರ ರಾಜ್ಯಾಧಿಕಾರವನ್ನು ಮತ್ತೆ ಒಡೆಯರ ಮನೆತನಕ್ಕೆ ನೀಡಲಾಯಿತು.

## ಶ್ರೀ ಭುವನೇಶ್ವರಿ ದೇವಸ್ಥಾನ

ಅರಮನೆಯ ಕೋಟೆಯ ದಕ್ಷಿಣದಲ್ಲಿರುವ ವರಾಹಸ್ವಾಮಿ ದೇವಸ್ಥಾನಕ್ಕೆ ಹೊಂದುವಂತೆ ಉತ್ತರ ಭಾಗದಲ್ಲಿ ಭುವನೇಶ್ವರಿ ದೇವಸ್ಥಾನವನ್ನು ಸ್ಥಾಪಿಸಲಾಗಿದೆ. ಇದರಿಂದ ಕೋಟೆ ಸಂಕೀರ್ಣದಲ್ಲಿ ಸಮಮಿತೀಯ ವಿನ್ಯಾಸ ಏರ್ಪಟ್ಟಂತಾಗಿದೆ. 1951ರಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಇದನ್ನು ಕಟ್ಟಿಸಿದರು. ದೇವಸ್ಥಾನದ ಗೋಪುರ ವಿಶಿಷ್ಟ ದ್ರಾವಿಡ ಶೈಲಿಯಲ್ಲಿದೆ. ಪ್ರಧಾನ ದೇವತೆಯಾದ ಭುವನೇಶ್ವರಿಯ ವಿಗ್ರಹವನ್ನು ಮೈಸೂರಿನ ಸುವಿಖ್ಯಾತ ಶಿಲ್ಪಿಗಳಾದ ಶಿಲ್ಪಿ ಸಿದ್ದಲಿಂಗಸ್ವಾಮಿ ಕಡೆದಿರುವರು. ಇವುಗಳ ಜೊತೆಗೆ ಸೂರ್ಯ, ಮಹಾವಿಷ್ಣು, ಮಹೇಶ್ವರ, ರಾಜರಾಜೇಶ್ವರಿ, ಗಣಪತಿ ಮತ್ತು ಚಾಮುಂಡೇಶ್ವರಿಯ ಇತರ ವಿಗ್ರಹಗಳನ್ನು ಅವರೇ ನಿರ್ಮಿಸಿದ್ದಾರೆ. ಈ ದೇವಸ್ಥಾನದಲ್ಲಿರುವ ಮುಖ್ಯ ವಸ್ತುಗಳ ಪೈಕಿ ಒಂದು ತಾಮ್ರದ ಸೂರ್ಯಮಂಡಲವಾಗಿದ್ದು ಇದನ್ನು ಮಹಾರಾಜ ಜಯಚಾಮರಾಜ ಒಡೆಯರ್ ಅವರು ಅರಮನೆಯಿಂದ ಈ ದೇವಸ್ಥಾನಕ್ಕೆ ವರ್ಗಾಯಿಸಿದರೆನ್ನಲಾಗಿದೆ.

## ಶ್ರೀ ಗಾಯತ್ರೀ ದೇವಸ್ಥಾನ

ತ್ರಿನಯನೇಶ್ವರ ದೇವಸ್ಥಾನಕ್ಕೆ ಸರಿಯಾಗಿ ಹೊಂದಿಕೊಳ್ಳುವ ರೀತಿಯಲ್ಲಿ ಕೋಟೆಯ ಆಗ್ನೇಯ ಮೂಲೆಯಲ್ಲಿ ಗಾಯತ್ರಿ ದೇವಸ್ಥಾನ ಇದ್ದು, ಇದರಿಂದ ಸಂಪೂರ್ಣ ಸಮಮಿತಿಯ ವಿನ್ಯಾಸ ಏರ್ಪಟ್ಟಿದೆ. ಈ ದೇವಸ್ಥಾನವನ್ನು ಕೂಡ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು 1953ರಲ್ಲಿ ನಿರ್ಮಾಣ ಮಾಡಿಸಿದರು. ಆವರಣದಲ್ಲಿ ಸಾವಿತ್ರಿ, ಗಾಯತ್ರಿ ಮತ್ತು ಲಕ್ಷ್ಮೀ ಈ ದೇವತೆಗಳ ಮೂರು ಗುಡಿಗಳಿವೆ.

ದೇವಸ್ಥಾನದ ನವರಂಗದಲ್ಲಿ ಗಣೇಶ, ಶಿವ, ಸೂರ್ಯ ಮತ್ತು ಮಹಾವಿಷ್ಣು ಇವರ ವಿಗ್ರಗಳು ಇವೆ. ಈ ಎಲ್ಲ ವಿಗ್ರಹಗಳನ್ನೂ ಮೈಸೂರಿನ ಸುಪ್ರಸಿದ್ಧ ಶಿಲ್ಪಿಗಳಾದ ಶಿಲ್ಪಿ ಸಿದ್ಧಲಿಂಗಸ್ವಾಮಿಗಳು ಕೆತ್ತಿದ್ದಾರೆ......

# ಮೈಸೂರು ಅರಮನೆ

## ಮಾರ್ಗದರ್ಶಿ

**ಶ್ರೀ ಡಿ. ರಂದೀಪ್** ಐ.ಎ.ಎಸ್.
ಕಾರ್ಯನಿರ್ವಾಹಕ ಅಧಿಕಾರಿಗಳು
ಮೈಸೂರು ಅರಮನೆ ಮಂಡಳಿ
ಅರಮನೆ ಆವರಣ, ಮೈಸೂರು – 570 001.



ಮುದ್ರಣ : 2017

ಅರಮನೆ ಮಂಡಳಿ, ಮೈಸೂರು

ಬೆಲೆ : ರೂ. 50.00

ಪ್ರಕಾಶಕರು :
ಕಾರ್ಯನಿರ್ವಾಹಕ ಅಧಿಕಾರಿಗಳು
ಮೈಸೂರು ಅರಮನೆ ಮಂಡಳಿ
ಅರಮನೆ ಆವರಣ, ಮೈಸೂರು – 570 001.

# ಮುನ್ನುಡಿ

ಉದ್ಯಾನ ನಗರಿಯಾದ ಮೈಸೂರಿನಲ್ಲಿ ವಿಶ್ವವಿಖ್ಯಾತ ಮೈಸೂರು ಅರಮನೆಯು ಪ್ರತಿನಿತ್ಯ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತಿರುತ್ತದೆ. ದೇಶಿ ಹಾಗೂ ವಿದೇಶಿ ಪ್ರವಾಸಿಗರ ಅನುಕೂಲಕ್ಕಾಗಿ ಒಂದು "ಪ್ರವಾಸಿಗರ ಮಾಗದರ್ಶಿ ಪುಸ್ತಕವನ್ನು" 1989ನೇ ವರ್ಷದಲ್ಲಿ ಮೈಸೂರು ಅರಮನೆಯ ವತಿಯಿಂದ ಪ್ರಕಟಿಸಲಾಗಿರುತ್ತದೆ. ಸದರಿ ಪುಸ್ತಕವು ಪ್ರಸಿದ್ಧಿಯಾಗಿದ್ದು, ಮೊದಲನೇ ಆವೃತ್ತಿಯಲ್ಲಿ ಒಂದು ಲಕ್ಷ ಪುಸ್ತಕಗಳನ್ನು ಮುದ್ರಿಸಲಾಗಿತ್ತು. ಸದರಿ ಪುಸ್ತಕಗಳು ಕಡಿಮೆ ಅವಧಿಯಲ್ಲಿ ಬೇಗ ಮಾರಾಟವಾಗಿರುತ್ತದೆ. 1996ನೇ ವರ್ಷದಲ್ಲಿ ಪರಿಷ್ಕೃತ ಮಾರ್ಗದರ್ಶಿ ಪುಸ್ತಕವನ್ನು ಪ್ರಕಟಿಸಲಾಯಿತು. ಸದರಿ ಮಾರ್ಗದರ್ಶಿ ಪುಸ್ತಕಗಳು ಸಹಾ ಕಡಿಮೆ ಅವಧಿಯಲ್ಲಿ ಮಾರಾಟವಾಗಿರುತ್ತದೆ. ಪ್ರಸ್ತುತ ಆರನೇ ಆವೃತ್ತಿಯ ಮಾರ್ಗದರ್ಶಿ ಪುಸ್ತಕವನ್ನು ಪ್ರವಾಸಿಗರ ಅನುಕೂಲಕ್ಕಾಗಿ ಪ್ರಕಟಿಸಲಾಗಿರುತ್ತದೆ.

ಮುಂದುವರೆದು ಪ್ರವಾಸಿಗರ ಮಾರ್ಗದರ್ಶಿ ಪುಸ್ತಕದ ಏಳನೇ ಆವೃತ್ತಿಯನ್ನು ಹೊರ ತರುವಲ್ಲಿ ಶ್ರೀ ಟಿ.ಎಸ್. ಸುಬ್ರಹ್ಮಣ್ಯ, ಉಪ ನಿರ್ದೇಶಕರು. ಇವರ ಪ್ರಯತ್ನಕ್ಕೆ ಶ್ಲಾಘಿಸುತ್ತಾ, ಸಹಕರಿಸಿದ ಎಲ್ಲಾ ನೌಕರರುಗಳಿಗೆ ನನ್ನ ವಂದನೆಗಳು.

ಸ್ಥಳ : ಮೈಸೂರು
ದಿನಾಂಕ : 26-06-2017

**(ಶ್ರೀ ಡಿ. ರಂದೀಪ್)** ಐ.ಎ.ಎಸ್.
ಕಾರ್ಯ ನಿರ್ವಾಹಕ ಅಧಿಕಾರಿಗಳು
ಮೈಸೂರು ಅರಮನೆ ಮಂಡಳಿ ಹಾಗೂ
ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ